BHIMAPPA SOMAPPA NAVI
Digitally signed by BHIMAPPA SOMAPPA NAVI

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ
(ಹಿಂದಿನ ಪದನಾಮ "ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ")

Karnataka State Akkamahadevi Women's University, Vijayapura
(Formerly known as "Karnataka State Women's University, Vijayapura")

# NAAC II CYCLE – SSR: Criteria 7:

# 7.1.9: Constitutional Obligations

# Programs organized by NSS Cell

7.01.9(2A)

ಕುಲಸಚಿವೆ ಡಾ.ಆರ್‌ಸುನಂದಮ್ಮ ಅಭಿಮತ

# ‘ಜಗತ್ತಿನಲ್ಲಿ ಭಾರತೀಯ ಸಂವಿಧಾನ ವಿಶಿಷ್ಟವಾದದ್ದು’

ಪ್ರಜಾವಾಣಿ ವಾರ್ತೆ

ವಿಜಯಪುರ: ‘ಭಾರತದ ಸಂವಿಧಾನ ಜಗತ್ತಿನ ಎಲ್ಲಾ ಸಂವಿಧಾನಗಳಲ್ಲಿಯೇ ವಿಶಿಷ್ಟವಾಗಿದ್ದು, ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಪಡಿಸುವಂತಾಗಿದೆ’ ಎಂದು ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಕುಲಸಚಿವೆ ಡಾ. ಆರ್.ಸುನಂದಮ್ಮ ಹೇಳಿದರು.

ನಗರದ ಸರ್ಕಾರಿ ನೌಕರರ ಸಭಾಭವನದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಆಹೇರಿ ಬಸವೇಶ್ವರ ಕರ್ಮವೀರ ಕಲಾ ಸಾಹಿತ್ಯ ಸಂಸ್ಕೃತಿ ವೇದಿಕೆ ವತಿಯಿಂದ ಸಂವಿಧಾನದ ಆಶಯ, ಪ್ರಜಾಪ್ರಭುತ್ವದ ವ್ಯವಸ್ಥೆ ಮತ್ತು ಮಾನವ ಹಕ್ಕುಗಳ ಕುರಿತು ಏರ್ಪಡಿಸಿದ್ದ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

‘ಅನೇಕ ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ, ಬಲಿದಾನ, ಶ್ರಮ, ಜ್ಞಾನದ ಫಲದಿಂದ ವ್ಯವಸ್ಥಿತ, ಕ್ರಮಬದ್ಧ ಹಾಗೂ ಉತ್ತಮವಾದ ಸಂವಿಧಾನವು ಅನೇಕ ಹಂತಗಳನ್ನು ಕ್ರಮಿಸಿದ ನಂತರವೇ ಲಿಖಿತ ರೂಪದಲ್ಲಿ ಆಡಳಿತ ವ್ಯವಸ್ಥೆಗೆ ದಾರಿದೀಪವಾಗಿದೆ. ಪ್ರಜಾಪ್ರಭುತ್ವದ ವ್ಯವಸ್ಥೆಯನ್ನು ಬಲಗೊಳಿಸಲು ಆರ್ಥಿಕ, ಸಾಮಾಜಿಕ, ರಾಜಕೀಯ, ಧಾರ್ಮಿಕ, ಆಧ್ಯಾತ್ಮಿಕ ಮತ್ತು ಶೈಕ್ಷಣಿಕ ರಂಗಗಳ ಮೂಲಕ ನಮ್ಮ ಹಿರಿಯರು ತಮ್ಮ ಕೆಚ್ಚೆದೆಯ ಹೋರಾಟ ಮಾಡಿಕೊಂಡು ಬಂದಿದ್ದಾರೆ’ ಎಂದು ತಿಳಿಸಿದರು.



ವಿಜಯಪುರದ ಸರ್ಕಾರಿ ನೌಕರರ ಸಭಾಭವನದಲ್ಲಿ ನಡೆದ ವಿಚಾರ ಸಂಕಿರಣ ಅಕ್ಕಮಹಾದೇವಿ ಮಹಿಳಾ ವಿ.ವಿ ಕುಲಸಚಿವೆ ಡಾ.ಆರ್‌ಸುನಂದಮ್ಮ ಉದ್ಘಾಟಿಸಿದರು

ಸಮಾಜ ಚಿಂತಕ ರಿಯಾಜ್ ಫಾರೂಕಿ ಮಾತನಾಡಿ, ‘ಸಾಮಾಜಿಕ ಮತ್ತು ಆರ್ಥಿಕ ಪ್ರಜಾಪ್ರಭುತ್ವವು ರಾಜಕೀಯ ಪ್ರಜಾಪ್ರಭುತ್ವದ ಮುಖ್ಯ ಜೀವಾಳವಾಗಿದೆ. ಸಂಸದೀಯ ಪ್ರಜಾಪ್ರಭುತ್ವವು ಸ್ವತಂತ್ರಕ್ಕೆ ನೀಡಿದಷ್ಟು ಸಮಾನತೆ, ಮಹತ್ವವನ್ನು ಸಹೋದರತೆ ಪ್ರೀತಿ ವಿಶ್ವಾಸಕ್ಕೆ ಬೆಲೆ ನೀಡಲಿಲ್ಲ. ಸಮಾನತೆ ನ್ಯಾಯ, ನೀತಿ ಮೌಲ್ಯಗಳ ಬಗ್ಗೆ ಹೆಚ್ಚಿನ ಪ್ರಾಮುಖ್ಯತೆ ನೀಡುವಲ್ಲಿ ವಿಫಲವಾಗಿದೆ. ಸ್ವಾತಂತ್ರ್ಯ ಮತ್ತು ಸಮಾನತೆಗಳ ಸಮತೋಲನ ಕಾಪಾಡುವಲ್ಲಿಯೂ ಅದು ಸೋಲು ಕಂಡಿತು’ ಎಂದು ತಿಳಿಸಿದರು.

ಪ್ರಾಚಾರ್ಯರಾದ ಡಾ.ಎಸ್.ಎಸ್. ನಾಗಠಾಣ, ಬಸವರಾಜ ಗಂಗನಳ್ಳಿ, ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಕೃಷಿ ಅಧಿಕಾರಿ ಬಸವರಾಜ ಬಿರಾದಾರ, ಮೋಹನೇಶ್ವರ ಮೇಟಿ, ಅಪ್ಪಾಸಾಬ ಯರನಾಳ ಮಾತನಾಡಿದರು.

ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸುರೇಶ ಶೇಡಶ್ಯಾಳ ಅಧ್ಯಕ್ಷತೆ ವಹಿಸಿದ್ದರು. ಇದೇ ವೇಳೆ ದ್ವಿತೀಯ ಪಿಯುಸಿಯಲ್ಲಿ ಶೇ 90 ರಷ್ಟು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಎಸ್.ಪಿ.ಬಿರಾದಾರ, ಭೀಮಶಿ ಕಲಾದಗಿ, ವೈಜನಾಥ ಕರ್ಪೂರಮಠ, ಪ್ರಭುಗೌಡ ಪಾಟೀಲ, ಎಲ್. ಜಿ.ಕುಂಬಾರ, ಪಿ.ಬಿ.ಚಲವಾದಿ, ಭಾಗ್ಯಾ ತಗ್ಗಳ್ಳಿ, ಶಾರದಾ ತಗ್ಗಳ್ಳಿ, ಸಂಗೀತಾ ಚವ್ಹಾಣ, ಭುವನೇಶ ಕಲಗೊಂಡ, ಶೇಖರ ಹೂಗಾರ, ಬಿ.ಎನ್.ಹಾಳಿ, ಜಿ.ಎಸ್.ಪಾಟೀಲ, ಬಿ.ಐ.ಬಿರಾದಾರ ಇದ್ದರು. ಬಂದೆಪ್ಪ ತೇಲಿ ಸ್ವಾಗತಿಸಿದರು. ಪ್ರೊ.ಶರಣಗೌಡ ಪಾಟೀಲ ನಿರೂಪಿಸಿದರು.

Event: Celebration of Constitution day.

Date: 25.5.2019

Resource person: Registrar

Dept: Karnataka Govt. servants Association.

7.1.9(2A)

ವಿಜಯವಾಣಿ ೨೭-೧೧-೨೦೧೯ ಪು-೨


ವಿವಿಧೆಡೆ ಸಮರ್ಪಣಾ ದಿನಾಚರಣೆ ಆಯೋಜನೆ | ವಿದ್ಯಾರ್ಥಿಗಳು, ಗಣ್ಯರು ಭಾಗಿ

# ಸಂವಿಧಾನ ಆಶಯ ಈಡೇರಿಕೆಗೆ ಸಂಕಲ್ಪ




ವಿಜಯವಾಣಿ ಚಿತ್ರಗಳು

ವಿಜಯಪುರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿವಿ ಸಮಾಜ ವಿಜ್ಞಾನ ವಿಭಾಗದದಲ್ಲಿ ನಡೆದ ಸಂವಿಧಾನ ಸಮರ್ಪಣಾ ದಿನದ 70ನೇ ವರ್ಷಾಚರಣೆ ಕಾರ್ಯಕ್ರಮದಲ್ಲಿ ವಿವಿ ಕುಲಪತಿ ಪ್ರೊ.ಸಬಿಹಾ ಭೂಮಿಗೌಡ, ಕುಲಸಚಿವೆ ಪ್ರೊ. ಆರ್. ಸುನಂದಮ್ಮ, ಪ್ರೊ.ಸಕ್ಪಾಲ್, ಪ್ರೊ.ಲಕ್ಕಣ್ಣವರ, ಪ್ರೊ.ಸೋನಾರ, ಡಾ.ಸೋನಕಾಂಬಳೆ, ಡಾ.ಕಲಾವತಿ ಕಾಂಬಳೆ, ಡಾ.ಯಲ್ಲಪ್ಪ ಕೊಂಬಿನೂರ, ಡಾ.ಆನಂದ ಕುಲಕರ್ಣಿ, ಡಾ.ಎಂ.ಎಸ್. ಮುಜಾವರ್, ಡಾ.ಚಂದ್ರಕಲಾ ಇತರರಿದ್ದರು.



Event :- Constitution Dedication Day

Date :- 27/11/2019 Vijayavani Page No:2

Dep : Social Science KSAWUU

R.S :

27/11/19

27/11/19

7.1.7 (2B)

# ಚುನಾವಣೆ ಅಕ್ರಮಕ್ಕೆ ಅಧಿಕಾರ ದಾಹ ಮೂಲ ಕಾರಣ

## ರಾಜ್ಯ ಮಾಧ್ಯಮ ಅಕಾಡೆಮಿ ಅಧ್ಯಕ್ಷ ಸಿದ್ದರಾಜು ಅಭಿಮತ | ಚುನಾವಣೆ ಕುರಿತ ವಿಚಾರ ಸಂಕಿರಣ

■ ವಿಜಯವಾಣಿ ಸುದ್ದಿಜಾಲ ವಿಜಯಪುರ

ಚುನಾವಣೆ ಅಕ್ರಮಕ್ಕೆ ಅಧಿಕಾರ ದಾಹ ಮೂಲ ಕಾರಣ. ಈ ಅಕ್ರಮ ತಡೆಗಟ್ಟಲು ಇಂದಿನ ಯುವಜನತೆ ಯಾವುದೇ ಆಸೆ-ಆಮಿಷಗಳಿಗೆ ಬಲಿಯಾಗದೇ ಮತ ಚಲಾಯಿಸಬೇಕು ಎಂದು ರಾಜ್ಯ ಮಾಧ್ಯಮ ಅಕಾಡೆಮಿ ಅಧ್ಯಕ್ಷ ಎಂ. ಸಿದ್ದರಾಜು ವಿದ್ಯಾರ್ಥಿನಿಯರಿಗೆ ಸಲಹೆ ಮಾಡಿದರು.

ಇಲ್ಲಿನ ಅಕ್ಕಮಹಾದೇವಿ ಮಹಿಳಾ ವಿವಿಯ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಬುಧವಾರ ಹಮ್ಮಿಕೊಂಡಿದ್ದ 'ಚುನಾವಣೆ ಯಾರ ಹೊಣೆ?' ಕುರಿತ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಸ್ತುತ ದಿನಗಳಲ್ಲಿ ಚುನಾವಣೆ ಒಂದು ಉದ್ಯಮವಾಗಿ ಮಾರ್ಪಟ್ಟಿದೆ. ಪ್ರತಿ ಚುನಾವಣೆಯನ್ನು ಅವಲೋಕನ ಮಾಡಿದಾಗ, ಇದು ಕೆಟ್ಟ ಸಂಪ್ರದಾಯದಂತೆ ಬೆಳೆಯುತ್ತಿದೆ ಎಂಬುವುದನ್ನು ಕಾಣಬಹುದಾಗಿದೆ. ಸುಧಾರಣೆ ಎಂಬುದು ಯಾರೋ ಬಂದು ಮಾಡುತ್ತಾರೆ ಎಂದು ನಿರೀಕ್ಷಿಸಿದರೆ ಅದು ನಮ್ಮ ಮೂರ್ಖತನ. ಸುಧಾರಣೆಯು ನಮ್ಮಿಂದ, ನಮ್ಮ ಮನೆಯಿಂದಲೇ ಆರಂಭವಾಗಬೇಕು ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಹಿಳಾ ವಿವಿ ಉಪ ಕುಲಪತಿ ಪ್ರೊ. ಸಬಿಹಾ ಮಾತನಾಡಿ, ಮಹಿಳೆಯರಲ್ಲಿ ಮತದಾನದ ಜಾಗೃತಿ ಮೂಡಿಸುವ ಮತ್ತು ಅದರ ಮಹತ್ವವನ್ನು ತಿಳಿಸುವ ಅವಶ್ಯಕತೆ ಇದೆ. ಇಂದಿನ ಯುವಜನತೆ ಸ್ಥಿರವಾಗಿ ಚಿಂತನೆ ಮತ್ತು ನಿರ್ಧಾರವನ್ನು ಕೈಗೊಂಡರೆ ಚುನಾವಣೆಯ ಅಕ್ರಮವನ್ನು ತಡೆಯಲು ತಮ್ಮ ಅಳಿಲು ಸೇವೆ ಸಲ್ಲಿಸಿದಂತಾಗುತ್ತದೆ ಎಂದರು.



ವಿಜಯಪುರದ ಮಹಿಳಾ ವಿವಿಯಲ್ಲಿ ಬುಧವಾರ ಹಮ್ಮಿಕೊಂಡಿದ್ದ ವಿಚಾರ ಸಂಕಿರಣವನ್ನು ರಾಜ್ಯ ಮಾಧ್ಯಮ ಅಕಾಡೆಮಿ ಅಧ್ಯಕ್ಷ ಎಂ.ಸಿದ್ದರಾಜು ಉದ್ಘಾಟಿಸಿದರು.

ಇದೇ ಸಂದರ್ಭದಲ್ಲಿ ವಿದ್ಯಾರ್ಥಿನಿಯರೊಂದಿಗೆ ಸಂವಾದ ಕಾರ್ಯಕ್ರಮ ನಡೆಯಿತು. ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ವಿದ್ಯಾರ್ಥಿನಿಯರು ಹೊರತಂದ 'ಮಹಿಳಾ ಧ್ವನಿ' ಪತ್ರಿಕೆಯ ವಿಶೇಷ ಸಂಚಿಕೆ ಮತ್ತು ಬೆಂಗಳೂರಿನ ಸಮಾಜಮುಖಿ ಮಾಸಪತ್ರಿಕೆ ಸಂಚಿಕೆ ಬಿಡುಗಡೆ ಮಾಡಲಾಯಿತು.

ಚಾಣಕ್ಯ ಕರಿಯರ್ ಅಕಾಡೆಮಿ ಮುಖ್ಯಸ್ಥ ಎನ್. ಎಂ. ಬಿರಾದಾರ, ಬೆಂಗಳೂರಿನ ಸಮಾಜಮುಖಿ ಮಾಸಪತ್ರಿಕೆಯ ಕಾರ್ಯಕಾರಿ ಸಂಪಾದಕ ಚಂದ್ರಶೇಖರ ಬೆಳಗೆರೆ, ಮಹಿಳಾ ವಿವಿ ಕುಲಸಚಿವ ಪ್ರೊ.ಎಲ್.ಆರ್. ನಾಯಕ, ಸಮಾಜಮುಖಿ ಮಾಸಪತ್ರಿಕೆ ಸಹಾಯಕ ಸಂಪಾದಕ ಬಸವರಾಜ ಭೂಸಾರೆ, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯದ ಸಹಾಯಕ ನಿರ್ದೇಶಕ ಡಾ.ಹನುಮಂತಯ್ಯ ಪೂಜಾರಿ, ರಾಜ್ಯಶಾಸ್ತ್ರ ವಿಭಾಗದ ಸಂಯೋಜಕ ಡಾ.ಆರ್.ವಿ. ಗಂಗಶೆಟ್ಟಿ, ವಿವಿಧ ವಿಭಾಗಗಳ ಪ್ರಾಧ್ಯಾಪಕರು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗ, ಸಂಶೋಧನಾ ಮತ್ತು ಸ್ನಾತಕೋತ್ತರ ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

Event : Voting Awareness Programme for women

Date : 5/4/2018, Vijayavani, Page 2.


~~Dept~~ :

Resource person : M. Siddharaju.

7.1.9(2c)

ವಿಶ್ವವಾಣಿ ದಿ 22-2-2018 ಪು-10

# ಎನ್‌ಎಸ್‌ಎಸ್ ಘಟಕಗಳಿಂದ ವಿವಿಗೆ ಕೀರ್ತಿ



ಕನ್ನಡ ಅಧ್ಯಯನ ಸಭಾ ಭವನದಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಎ ಮತ್ತು ಮುಕ್ತ ಘಟಕದ ವತಿಯಿಂದ ನಡೆದ ವಾರ್ಷಿಕ ವಿಶೇಷ ಶಿಬಿರದಲ್ಲಿ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ.ಎಲ್.ಆರ್. ನಾಯಕ ಮಾತನಾಡಿದರು.

**ವಿಜಯಪುರ:** ಮಹಿಳಾ ವಿಶ್ವವಿದ್ಯಾನಿಲಯದ ಎನ್‌ಎಸ್‌ಎಸ್ ಘಟಕಗಳು ಸಕ್ರಿಯವಾಗಿ ಕಾರ್ಯ ನಿರ್ವಹಿಸುವುದರ ಮೂಲಕ ರಾಜ್ಯ ಮತ್ತು ರಾಷ್ಟ್ರಮಟ್ಟದ ಪ್ರಶಸ್ತಿಗಳನ್ನು ಪಡೆದು ವಿಶ್ವವಿದ್ಯಾನಿಲಯಕ್ಕೆ ಕೀರ್ತಿ ತಂದಿರುವುದು ಹೆಮ್ಮೆಯ ಸಂಗತಿ ಎಂದು ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ. ಎಲ್.ಆರ್. ನಾಯಕ ಹೇಳಿದರು.

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ಜ್ಞಾನಶಕ್ತಿ ಆವರಣದ ಕನ್ನಡ ಅಧ್ಯಯನ ಕಟ್ಟಡದ ಸಭಾ ಭವನದಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಎ ಮತ್ತು ಮುಕ್ತ ಘಟಕದ ವತಿಯಿಂದ ಹಮ್ಮಿಕೊಂಡಿದ್ದ ಐದು ದಿನದ ವಾರ್ಷಿಕ ವಿಶೇಷ ಶಿಬಿರವನ್ನು ಸಸಿಗೆ ನೀರೆರೆಯುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಎನ್‌ಎಸ್‌ಎಸ್ ಸಂಯೋಜನಾಧಿಕಾರಿ ಡಾ. ಬಸವರಾಜ ಲಕ್ಕಣ್ಣವರ ಮಾತನಾಡಿ, ನನಗಾಗಿ ದೇಶ ಅಲ್ಲ ದೇಶಕ್ಕಾಗಿ ನಾನು ಎಂಬುವುದೇ ಎನ್‌ಎಸ್‌ಎಸ್‌ನ ಮೂಲ ಉದ್ದೇಶ. ಉತ್ತಮ ಸಮಾಜವನ್ನು ನಿರ್ಮಾಣ ಮಾಡುವಲ್ಲಿ ನಮ್ಮ ಪಾತ್ರವೇನು ಎಂಬುವುದನ್ನು ಎನ್‌ಎಸ್‌ಎಸ್ ತಿಳಿಸಿಕೊಡುತ್ತದೆ ಎಂದರು.

ವಿದ್ಯಾರ್ಥಿಗಳ ವ್ಯಕ್ತಿತ್ವ ಬದಲಾಗುವಲ್ಲಿ ಎನ್‌ಎಸ್‌ಎಸ್ ಮಹತ್ವದ ಪಾತ್ರ ವಹಿಸುತ್ತದೆ. ಸಮಾಜದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯ ಸರ್ವತೋಮುಖ ಅಭಿವೃದ್ಧಿಗೆ ಎನ್‌ಎಸ್‌ಎಸ್ ಅನುಕೂಲವಾಗುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಕಾರ್ಯಕ್ರಮಧಿಕಾರಿ ಡಾ. ಎಂ. ನಾಗರಾಜ, ಡಾ. ಭಾಗ್ಯಶ್ರೀ ದೊಡಮನಿ, ಎನ್‌ಎಸ್‌ಎಸ್ ಸ್ವಯಂ ಸೇವಕಿಯರು ವಿವಿಧ ವಿಭಾಗಗಳ ಸಂಶೋಧನಾ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು. ರೂಪಾ ಚಳಕೇರಿ ನಿರೂಪಿಸಿದರು. ತಯಬಾ ವಂದಿಸಿದರು.

Event :- National Service Scheme

~~Dept~~ Date : 22-2-2018, Vishwavani, Page 10

Dept : NSS cell

Resource person :- Prof. L. R. Nayak.

Event: NSS camp
Date: 27/3/2019, Udayavani, page-4
Dept: —

7.1.9 (2c)

ಉದಯವಾಣಿ

ವಿಶೇಷ ಶಿಬಿರ

ದಿ 12-2-2018 - ಪು - 4

# ಉತ್ತಮ ಸಮಾಜಕ್ಕೆ ಎನ್ನೆಸ್ಸೆಸ್ ಅವಶ್ಯ

## ■ ಧನಾತ್ಮಕ ಮನೋಭಾವ ಬೆಳೆಸಿಕೊಳ್ಳಿ ■ ಪಠ್ಯೇತರ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಿ

ವಿಜಯಪುರ: ವಿದ್ಯಾರ್ಥಿಗಳನ್ನು ಸಮಾಜದಲ್ಲಿ ಸತ್ಪ್ರಜೆಯಾಗಿ ರೂಪಿಸಲು, ಸಮಾಜದಲ್ಲಿ ಸಹಬಾಳ್ವೆಯ ಹಾಗೂ ಹೊಂದಾಣಿಕೆ ಮನೋಭಾವ ಬೆಳೆಸಲು ಎನ್ನೆಸ್ಸೆಸ್ ಶಿಬಿರಗಳು ಅವಶ್ಯವಾಗಿವೆ ಎಂದು ಕಲ್ಪನಾ ಪಾಟೀಲ ಅಭಿಪ್ರಾಯಪಟ್ಟರು.

ನಗರದ ಬಿಎಲ್‌ಡಿಇ ಸಂಸ್ಥೆಯ ಬಂಗಾರಮ್ಮ ಸಜ್ಜನ ಕಲಾ ಹಾಗೂ ವಾಣಿಜ್ಯ ಮಹಿಳಾ ಮಹಾವಿದ್ಯಾಲಯ ಹಾಗೂ ಅಕ್ಕ ಮಹಾದೇವಿ ಮಹಿಳಾ ವಿಶ್ವ ವಿದ್ಯಾಲಯ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಸಮಾಜದಲ್ಲಿ ನೈರ್ಮಲ್ಯ ಸೇವಾಮನೋಭಾವದ ಉದ್ದೇಶ ಹೊಂದಿದ ರಾಷ್ಟ್ರೀಯ ಸೇವಾ ಶಿಬಿರ ಆರೋಗ್ಯವಂತ ಸಮಾಜ ನಿರ್ಮಿಸುವಲ್ಲಿ ನಿರಂತರ ಶ್ರಮಿಸುತ್ತಿದೆ. ಹೊಸ ಹೊಸ ಅನುಭವಗಳನ್ನು ನೀಡುತ್ತಾ ವಿದ್ಯಾರ್ಥಿನಿಯರ ವ್ಯಕ್ತಿತ್ವ ವಿಕಸನದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂದರು.

ಕರ್ನಾಟಕ ರಾಜ್ಯ ಅಕ್ಕ ಮಹಾದೇವಿ ಮಹಿಳಾ ವಿಶ್ವ ವಿದ್ಯಾಲಯದ ನಿರ್ದೇಶಕ ಡಾ| ಎಸ್.ಎ. ಖಾಜಿ ಮಾತನಾಡಿ, ವಿದ್ಯಾರ್ಥಿ ದೆಸೆಯಲ್ಲಿ ಸಮುದಾಯದ ಜೊತೆ ಬೆರೆತು ವ್ಯಕ್ತಿತ್ವ ವಿಕಸನ ಮಾಡಿಕೊಂಡು ಧನಾತ್ಮಕ ಮನೋಭಾವನೆ ಬೆಳೆಸಿಕೊಳ್ಳುವಲ್ಲಿ ಎನ್ನೆಸ್ಸೆಸ್ ಶಿಬಿರಗಳು ಸಹಕಾರಿ ಆಗುತ್ತವೆ. ವಿದ್ಯಾರ್ಥಿಗಳಲ್ಲಿ ಆತ್ಮೀಯತೆ, ಪರಸ್ಪರ ಸಹಕಾರ, ಸ್ನೇಹ, ಭಾತೃತ್ವ, ಹೊಂದಾಣಿಕೆ, ವಿಶ್ವಾಸ, ನಂಬಿಕೆ, ಸಮಾನತೆಯಂತಹ ಮಾನವೀಯ ಮೌಲ್ಯಗಳು ಸಹಜವಾಗಿ ವಿಕಸನಗೊಳ್ಳುವಂತೆ ಮಾಡುತ್ತವೆ. ಪಠ್ಯಗಳ ಜೊತೆ ಪಠ್ಯೇತರ ಚಟುವಟಿಕೆಗಳಲ್ಲೂ ಮಕ್ಕಳು ಬೆಳವಣಿಗೆ ಹೊಂದಲು ಇಂಥ ಶಿಬಿರಗಳು ಸಹಕಾರಿ ಆಗುತ್ತವೆ ಎಂದು ವಿವರಿಸಿದರು.

ಅಧ್ಯಕ್ಷತೆ ವಹಿಸಿದ್ದ ಪ್ರೊ| ಪಿ.ಎಚ್. ಹೂಗಾರ ಮಾತನಾಡಿ, ಶಿಬಿರದ ಮೂಲಕ ಕ್ಷೇತ್ರ ಅಧ್ಯಯನ ಮಾಡುವದರಿಂದ ವಿದ್ಯಾರ್ಥಿಗಳಲ್ಲಿ ಸ್ವಯಂ ಪ್ರಜ್ಞೆ ಬೆಳೆಯುತ್ತದೆ ಎಂದರು.

ಕರ್ನಾಟಕ ರಾಜ್ಯ ಅಕ್ಕ ಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಕಾರ್ಯಕ್ರಮದ ಸಂಯೋಜನಾಧಿಕಾರಿ ಡಾ| ಬಿ.ಎಲ್. ಲಕ್ಕಣ್ಣವರ ಮಾತನಾಡಿದರು. ಎನ್ನೆಸ್ಸೆಸ್ ಶಿಬಿರಾಧಿಕಾರಿ ಬಿ.ಬಿ. ಹಚಡದ ಪ್ರಾಸ್ತಾವಿಕ ಮಾತನಾಡಿದರು.

ಡಾ| ಟಿ.ಎನ್. ಹಸರಡ್ಡಿ, ಡಾ| ಕೆ.ಎ. ಪಾಟೀಲ, ನರೇಶ ಪೋತದಾರ, ಯಲ್ಲಪ್ಪ ಕುಚನೂರ ಇದ್ದರು. ವಿದ್ಯಾರ್ಥಿನಿಯರು ಎನ್ನೆಸ್ಸೆಸ್ ಗೀತೆ ಹಾಡಿದರು. ಸಿ.ಎಸ್. ಕುನ್ನೂರ ಸ್ವಾಗತಿಸಿದರು. ರೇಣುಕಾದೇವಿ ಕಮತರ ನಿರೂಪಿಸಿದರು. ಶ್ವೇತಾ ಘಂಟಿ ವಂದಿಸಿದರು.



ವಿಜಯಪುರ: ನಗರದಲ್ಲಿ ಬಂಗಾರಮ್ಮ ಸಜ್ಜನ ಕಲಾ ಹಾಗೂ ವಾಣಿಜ್ಯ ಮಹಿಳಾ ಪದವಿ ಕಾಲೇಜಿನಿಂದ ಹಮ್ಮಿಕೊಂಡಿದ್ದ ಎನ್ನೆಸ್ಸೆಸ್ ಶಿಬಿರಕ್ಕೆ ಕಲ್ಪನಾ ಪಾಟೀಲ ಚಾಲನೆ ನೀಡಿದರು.

Res. person: Kalpana Patil.

# ಪರಿಸರ ಸ್ವಚ್ಛತೆ ಮೊದಲ ಆದ್ಯತೆಯಾಗಲಿ



ಸ್ವಚ್ಛ ಮಾಡುವ ಕಾರ್ಯದಲ್ಲಿ ನಿರತರಾದ ಎನ್‌ಎಸ್‌ಎಸ್ ಸ್ವಯಂ ಸೇವಕಿಯರು.

**ವಿಜಯಪುರ:** ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದಲ್ಲಿ ಹಮ್ಮಿಕೊಂಡ ಏಳು ದಿನದ ಎನ್‌ಎಸ್‌ಎಸ್ ಶಿಬಿರದಲ್ಲಿ ಎನ್‌ಎಸ್‌ಎಸ್ ಸ್ವಯಂ ಸೇವಕಿಯರು ಹಾಗೂ ವಿದ್ಯಾರ್ಥಿಗಳು ಜ್ಞಾನಶಕ್ತಿ ಆವರಣದ ಪ್ಲಾಸ್ಟಿಕ್ ಮತ್ತಿತರ ತ್ಯಾಜ್ಯವನ್ನು ಸ್ವಚ್ಛಗೊಳಿಸಿದರು.

ಸ್ವಚ್ಛತಾ ಕಾರ್ಯಕ್ರಮದಲ್ಲಿ ತೊಡಗಿದ ವಿದ್ಯಾರ್ಥಿನಿಯರು ಕಡು ಬಿಸಿಲನ್ನು ಲೆಕ್ಕಿಸದೆ ತಲೆಯ ಮೇಲೆ ಕ್ಯಾಪ್, ಮುಖ ಮತ್ತು ಮೂಗಿಗೆ ಮಾಸ್ಕ್, ಕೈಗಳಿಗೆ ರಕ್ಷಾ ಕವಚ ಧರಿಸಿ ಪೊರಕೆ, ಕೋಲು ಹಿಡಿದು ಗುದ್ದಲಿ, ಪಿಕಾಸಿ ಬಳಸಿ ಸ್ವಚ್ಛತಾ ಕಾರ್ಯದಲ್ಲಿ ನಿರತರಾಗಿದ್ದು, ಯುವ ಮಹಿಳಾ ಶಕ್ತಿಗೆ ಭೂಷಣವಾಗಿತ್ತು.

ಮಹಿಳಾ ವಿವಿಯ ವ್ಯಾಪ್ತಿಯಲ್ಲಿ ಬರುವ ವಿವಿಧ ಕಾಲೇಜುಗಳ ವಿದ್ಯಾರ್ಥಿನಿಯರು ತಂಡೋಪತಂಡವಾಗಿ ಕೆಲಸ ಮಾಡುತ್ತಿರುವುದು ಇತರರಿಗೆ ಮಾದರಿಯಾಗಿ ಕಂಡು ಬಂತು. ತಂಡದಲ್ಲಿ ಹುರುಪು ತುಂಬುವ ಎಲ್ಲ ಸ್ವಯಂ ಸೇವಾ ಅಧಿಕಾರಿಗಳು, ಸಂಯೋಜಕರು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುತ್ತಾ ಅವರು ಕಾರ್ಯದಲ್ಲಿ ತೊಡಗಿದ್ದು ವಿಶೇಷವಾಗಿತ್ತು.

ಕಾರ್ಯಕ್ರಮದಲ್ಲಿ ಎನ್‌ಎಸ್‌ಎಸ್ ಸಂಯೋಜಕರಾದ ಗುಲಾಬ ರಾಠೋಡ, ಡಾ.ಹನುಮಂತಯ್ಯ ಪೂಜಾರಿ, ಕಲಾವತಿ ಕಾಂಬಳೆ ಹಾಗೂ ಮತ್ತಿತರರು ಪಾಲ್ಗೊಂಡಿದ್ದರು.

Event : 7 days NSS Camp
Date : 30/3/2019, Sanyukta karnataka pg No: 5
Dep :
Res person :-

2.1.9(21)

ಕನ್ನಡ ಪ್ರಭ 31-3-2019 ಪುಟ-4

# ಶಿವಶರಣೆಯರ ನಾಡಿನಲ್ಲಿ ಸ್ವಚ್ಛತೆ ಕಾಯ್ದುಕೊಳ್ಳಿ

## ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ವಿಶೇಷ ಶಿಬಿರದಲ್ಲಿ ಪ್ರಾಧ್ಯಾಪಕ ಡಾ. ವಿಷ್ಣು ಶಿಂಧೆ ಮನವಿ



ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ವಿಶೇಷ ಶಿಬಿರದಲ್ಲಿ ಶಿಕ್ಷಣ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ವಿಷ್ಣು ಶಿಂಧೆ ಮುಖ್ಯ ಅತಿಥಿಯಾಗಿ ಆಗಮಿಸಿ ಮಾತನಾಡಿದರು.

• **ಕನ್ನಡಪ್ರಭ ವಾರ್ತೆ** ವಿಜಯಪುರ

ಸೂಫಿ ಸಂತರು, ಶಿವ ಶರಣೆ ಅಕ್ಕಮಹಾದೇವಿ ನೆಲೆಸಿದ ಈ ನೆಲದಲ್ಲಿ ನಾವು ಸ್ವಚ್ಛತೆ ಕಾಪಾಡಬೇಕು. ಇದು ನಮ್ಮೆಲ್ಲರ ಗುರುತರ ಜವಾಬ್ದಾರಿ ಎಂದು ಶಿಕ್ಷಣ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ವಿಷ್ಣು ಶಿಂಧೆ ಹೇಳಿದರು.

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ಜ್ಞಾನಶಕ್ತಿ ಆವರಣದ ಡಾ. ಬಿ. ಆರ್. ಅಂಬೇಡ್ಕರ್ ಸಭಾಭವನದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಸಹಯೋಗದಲ್ಲಿ ಇತ್ತೀಚೆಗೆ ಹಮ್ಮಿಕೊಂಡ ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ವಿಶೇಷ ಶಿಬಿರದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಅವರು, ಎನ್‌ಎಸ್‌ಎಸ್ ಎಂದರೆ ಕಸವನ್ನು ಮಾತ್ರ ತೆಗೆಯುವುದಲ್ಲ, ರಾಷ್ಟ್ರವನ್ನು ನಿರ್ಮಾಣ ಮಾಡುವುದು. ಇದು ಕೇವಲ ಗಿಡ ಬೆಳೆಸುವ ಕಾರ್ಯಕ್ರಮ ಎಂಬುವುದಕ್ಕೆ ಸೀಮಿತವಾಗದೇ ಮೌಢ್ಯ ತೊಲಗಿಸಿ, ಮನಸ್ಸುಗಳನ್ನು ಬೆಸೆಯುವ ಮತ್ತು ಸಮುದಾಯವನ್ನು ಮೇಲೆತ್ತುವ ಕಾರ್ಯಕ್ರಮವಾಗಬೇಕು ಎಂದು ತಿಳಿಸಿದರು.

ನಿಮ್ಮ ಬದುಕನ್ನು ನಿರ್ಮಾಣ ಮಾಡಿಕೊಳ್ಳುವುದು ನಿಮ್ಮ ಕೈಯಲ್ಲಿದೆ. ಮಹಿಳೆಯರು ಪ್ರಜ್ಞಾವಂತರಾಗಿ ಪ್ರಶ್ನಿಸುವ ಗುಣವನ್ನು ಬೆಳೆಸಿಕೊಳ್ಳಬೇಕು. ಬದುಕಿನ ಮೌಲ್ಯವನ್ನು ತಿಳಿದುಕೊಂಡಾಗ ಮಾತ್ರ ಸಮಾಜದಲ್ಲಿರುವ ಡೊಂಕನ್ನು ತಿದ್ದಲು ಸಾಧ್ಯ ಎಂದರು.

ಎಲ್ಲ ಕಷ್ಟಗಳ ಮಧ್ಯೆಯೇ ಸೋಲನ್ನು ಒಪ್ಪಿಕೊಳ್ಳದೆ ಧೈರ್ಯದಿಂದ ಮುನ್ನುಗ್ಗಿ ಮತ್ತು ಪ್ರಚಲಿತ ವಿದ್ಯಮಾನಗಳಲ್ಲಿ ನಿಮಗೆ ಒಂದು ಸ್ಥಾನವಿದೆ. ಅದನ್ನು ಮುಂದುವರೆಸಿಕೊಂಡು ಹೋದರೆ ಒಳ್ಳೆಯ ಭವಿಷ್ಯವಿದೆ ಎಂದು ವಿದ್ಯಾರ್ಥಿನಿಯರಿಗೆ ಕಿವಿಮಾತು ತಿಳಿಸಿದರು.

ಡಾ.ಹನುಮಂತಯ್ಯ ಪೂಜಾರಿ ಅಧ್ಯಕ್ಷತೆ ವಹಿಸಿ ಮಾತನಾಡಿ, ವಾಸ್ತವತೆಯನ್ನು ಮತ್ತು ಪ್ರಶ್ನಿಸುವ ಮನೋವೃತ್ತಿಯನ್ನು ಬೆಳೆಸಿಕೊಳ್ಳುವುದರ ಜೊತೆಗೆ ಸಂಸ್ಕೃತಿಯ, ಸಂಸ್ಕಾರದ ಅರಿವು ಇರಬೇಕು ಎಂದರು.

ಎನ್‌ಎಸ್‌ಎಸ್ ಘಟಕದ ಕಾರ್ಯಕ್ರಮಾಧಿಕಾರಿ ಡಾ. ಗುಲಾಬ ರಾಠೋಡ, ಎನ್‌ಎಸ್‌ಎಸ್ ಮುಕ್ತ ಘಟಕದ ಕಾರ್ಯಕ್ರಮಾಧಿಕಾರಿ ಡಾ.ಕಲಾವತಿ ಕಾಂಬಳೆ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

## ಎನ್‌ಎಸ್‌ಎಸ್ ಶಿಬಿರಾರ್ಥಿಗಳಿಂದ ಸ್ವಚ್ಛತಾ ಕಾರ್ಯ

**ವಿಜಯಪುರ:** ಎನ್‌ಎಸ್‌ಎಸ್ ವಿದ್ಯಾರ್ಥಿಗಳಿಗೆ ಜೀವನದ ಪಾಠವನ್ನು ಕಲಿಸುತ್ತದೆ. ವಿದ್ಯಾರ್ಥಿ ದೆಸೆಯಿಂದಲೇ ಬದುಕು ಶಿಸ್ತಿಗೆ ಒಳಪಟ್ಟರೆ ಅದು ಸಾರ್ಥಕ ಜೀವನವಾಗುತ್ತದೆ. ಸ್ವಚ್ಛ ಭಾರತ ಮತ್ತು ಸ್ವಚ್ಛ ಮನಸ್ಸು ಭಾರತೀಯರ ಜೀವನ ಮಂತ್ರವಾಗಬೇಕಿದೆ. ಅದು ಯುವಶಕ್ತಿಯ ಕಾರ್ಯತಂತ್ರವಾಗಬೇಕು. ನಾವು ನಮ್ಮ ಸುತ್ತಲಿರುವ ವಾತಾವರಣವನ್ನು ಶುಚಿಗೊಳಿಸಿದರೆ ಬದುಕಿನ ರುಚಿ ಹೆಚ್ಚಾಗುತ್ತದೆ. ಜೀವನದ ಪ್ರತಿ ಆಯಾಮದಲ್ಲಿಯೂ ಶಿಸ್ತು, ಶ್ರದ್ಧೆ, ಪರಿಶ್ರಮ ಮತ್ತು ನಿಷ್ಠೆ ವೃದ್ಧಿಯಾಗುವುದು ಎಂದು ಎನ್‌ಎಸ್‌ಎಸ್ ವಿದ್ಯಾರ್ಥಿನಿ ರೂಪಾ ಅಭಿಪ್ರಾಯಪಟ್ಟರು.

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದಲ್ಲಿ ಏಳು ದಿನದ ಎನ್‌ಎಸ್‌ಎಸ್ ಶಿಬಿರವನ್ನು ಹಮ್ಮಿಕೊಳ್ಳಲಾಗಿದ್ದು, ಜ್ಞಾನಶಕ್ತಿ ಆವರಣದಲ್ಲಿ ಕಂಡು ಬರುವ ಪ್ಲಾಸ್ಟಿಕ್ ಮತ್ತಿತರ ತ್ಯಾಜ್ಯವನ್ನು ಸಂಗ್ರಹಿಸಿ, ವಿಂಗಡಿಸಿ ಸ್ವಚ್ಛ ಮಾಡುವ ಕಾರ್ಯದಲ್ಲಿ ನಿರತರಾದ ಎನ್‌ಎಸ್‌ಎಸ್ ಸ್ವಯಂ ಸೇವಕಿಯರು ಇನ್ನಿತರ ವಿದ್ಯಾರ್ಥಿಗಳಲ್ಲಿ ಸ್ವಚ್ಛತೆಯ ಪ್ರಜ್ಞೆ ಮೂಡಿಸುತ್ತಿರುವುದು ವಿಶೇಷವಾಗಿತ್ತು.

ಸ್ವಚ್ಛತಾ ಕಾರ್ಯಕ್ರಮದಲ್ಲಿ ತೊಡಗಿದ ವಿದ್ಯಾರ್ಥಿನಿಯರು ಕಡು ಬಿಸಿಲನ್ನು ಲೆಕ್ಕಿಸದೆ ತಲೆಯ ಮೇಲೆ ಕ್ಯಾಪ್, ಮುಖ ಮತ್ತು ಮೂಗಿಗೆ ಮಾಸ್ಕ್, ಕೈಗಳಿಗೆ ರಕ್ಷಾ ಕವಚ ಧರಿಸಿ ಪೊರಕೆ, ಕೋಲು ಹಿಡಿದು ಗುದ್ದಲಿ, ಪಿಕಾಸಿ ಬಳಸಿ ಸ್ವಚ್ಛತಾ ಕಾರ್ಯದಲ್ಲಿ ನಿರತರಾಗಿದ್ದು, ಯುವ ಮಹಿಳಾ ಶಕ್ತಿಗೆ ಭೂಷಣವಾಗಿತ್ತು.

ಮಹಿಳಾ ವಿವಿಯ ವ್ಯಾಪ್ತಿಯಲ್ಲಿ ಬರುವ ವಿವಿಧ ಕಾಲೇಜುಗಳ ವಿದ್ಯಾರ್ಥಿನಿಯರು ತಂಡೋಪತಂಡವಾಗಿ ಕೆಲಸ ಮಾಡುತ್ತಿರುವುದು ಇತರರಿಗೆ ಮಾದರಿಯಾಗಿ ಕಂಡು ಬಂತು. ತಂಡದಲ್ಲಿ ಹುರುಪು ತುಂಬುವ ಎಲ್ಲ ಸ್ವಯಂ ಸೇವಾ ಅಧಿಕಾರಿಗಳು, ಸಂಯೋಜಕರು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುತ್ತಾ ಅವರು ಕಾರ್ಯದಲ್ಲಿ ತೊಡಗಿದ್ದರು. ಕಾರ್ಯಕ್ರಮದಲ್ಲಿ ಎನ್‌ಎಸ್‌ಎಸ್ ಸಂಯೋಜಕರಾದ ಗುಲಾಬ ರಾಠೋಡ, ಡಾ. ಹನುಮಂತಯ್ಯ ಪೂಜಾರಿ, ಕಲಾವತಿ ಕಾಂಬಳೆ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ವಿಶೇಷ ಉಪನ್ಯಾಸದ ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು.

Event: N.S.S. Camp. on clean environment
Date: 31-03-2019, Kannada Prabha, page-4
Department: Education
Resource person- Dr. Vishnu Shinde

OIC
1/4/19

1/4/19

2.1.9(20)

ಸಂಯುಕ್ತ ಕರ್ನಾಟಕ ದಿ: ೧೧-೮-೨೦೧೯ ಪು-೨

# ಎಲ್ಲರೂ ಸ್ವಚ್ಛತೆಯತ್ತ ಗಮನ ಕೊಡಿ

ಸಂ.ಕ. ಸಮಾಚಾರ ವಿಜಯಪುರ

ರಾಷ್ಟ್ರಪಿತ ಮಹಾತ್ಮಾ ಗಾಂಧಿ ಸೇವೆ ಎಂಬ ಪದಕ್ಕೆ ಹೆಸರಾದಂತವರು. ಸಾರ್ವಜನಿಕ ಸ್ಥಳಗಳನ್ನು ಸ್ವತಃ ಅವರೇ ಸ್ವಚ್ಛಗೊಳಿಸುತ್ತಿದ್ದರು ಎಂದು ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಕುಲಸಚಿವೆ ಪ್ರೊ. ಆರ್. ಸುನಂದಮ್ಮ ಹೇಳಿದರು.

ಅಕ್ಕಮಹಾದೇವಿ ಮಹಿಳಾ ವಿವಿ ಜ್ಞಾನಶಕ್ತಿ ಆವರಣದಲ್ಲಿ ಎನ್.ಎಸ್.ಎಸ್. ಕೋಶದ ವತಿಯಿಂದ ಹಮ್ಮಿಕೊಂಡಿದ್ದ ವಿಶ್ವವಿದ್ಯಾನಿಲಯ ಮಟ್ಟದ ನಾಯಕತ್ವ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಸ್ವಚ್ಛತೆ, ನೈರ್ಮಲ್ಯ ಎನ್ನುವುದು ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಮಹಾತ್ಮಾ ಗಾಂಧೀಜಿ ಅವರ ಮೂಲಮಂತ್ರಗಳಾಗಿದ್ದವು. ಸ್ವಚ್ಛತೆ ಮತ್ತು ನೈರ್ಮಲ್ಯ ನಮ್ಮ ಜೀವನದಲ್ಲಿ ಆರೋಗ್ಯ ನೆಲೆಸುವಂತೆ ಮಾಡುತ್ತಿವೆ ಎಂದರು.

ಗಾಂಧಿಯವರು ಸೇವೆ ಎಂಬುವುದು ನಿಸ್ವಾರ್ಥದಿಂದ ಕೂಡಿರಬೇಕು ಎಂಬುದನ್ನು ತಿಳಿಸಿಕೊಟ್ಟವರು. ತಮ್ಮ ಜೀವನವನ್ನೆ ಅವರು ಸೇವೆಗಾಗಿ ಮೀಸಲಿಟ್ಟಂತಹ ಮಹಾತ್ಮಾ ಅವರು. ಆದ ಕಾರಣ ಎನ್.ಎಸ್.ಎಸ್. ಸ್ವಯಂ ಸೇವಕಿಯರಾದ ನಿಮಗೆ ಸಾರ್ವಜನಿಕ ಸೇವೆಯ ಕುರಿತು ಹೆಮ್ಮೆ ಇರಬೇಕು. ನಮ್ಮ ಕೆಲಸ ಮತ್ತು ನಮ್ಮತನದ ಕುರಿತು ನಮ್ಮಲ್ಲಿ ಸದಾ ಗೌರವವಿರಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮ ಸಂಯೋಜಕ ಪ್ರೊ. ಬಿಎಲ್. ಲಕ್ಕಣ್ಣವರ, ಮಹಿಳಾ ಪದವಿ ಮಹಾವಿದ್ಯಾಲಯಗಳ ಕಾರ್ಯಕ್ರಮಗಳ ಅಧಿಕಾರಿಗಳು, ವಿಶ್ವ ವಿದ್ಯಾನಿಲಯದ ಸಿಬ್ಬಂದಿ ಮತ್ತು ಸ್ವಯಂ ಸೇವಕಿಯರು ಉಪಸ್ಥಿತರಿದ್ದರು.

ಶ್ವೇತಾ ಘಂಟಿ ವಂದಿಸಿದರು. ಪಾಂಡುರಂಗ ಕುಂಬಾರ ಕಾರ್ಯಕ್ರಮ ನಿರೂಪಿಸಿದರು.



ವಿಜಯಪುರದ ಅಕ್ಕಮಹಾದೇವಿ ಮಹಿಳಾ ವಿ.ವಿ.ಯಲ್ಲಿ ನಡೆದ ನಾಯಕತ್ವ ಶಿಬಿರಕ್ಕೆ ಪ್ರೊ. ಆರ್. ಸುನಂದಮ್ಮ ಚಾಲನೆ ನೀಡಿದರು.

13/8/19

13/8/19

Event: University level Leadership camp.

Date: 11/8/2019

Dept: –

Res. person: –

7.1.9(c)

ಪ್ರಜಾವಾಣಿ ದಿ 2-4-2021 ಪು-2

Event: NSS camp 1st 2020 Vijaypur

Date: 2/4/2021

Dept: NSS

Res Person: Prof. B.K. Tulasimala

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದಲ್ಲಿ ರಾಷ್ಟ್ರೀಯ ಭಾವೈಕ್ಯ ಶಿಬಿರ

# ಎನ್‌ಎಸ್‌ಎಸ್ ಶಿಬಿರಾರ್ಥಿಗಳ ಕಲರವ

• ಬಸವರಾಜ್ ಸಂಪಳ್ಳಿ

ವಿಜಯಪುರ: ಇಲ್ಲಿನ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದಲ್ಲಿ ಒಂದು ವಾರ ಆಯೋಜಿಸಲಾಗಿದ್ದ ರಾಷ್ಟ್ರೀಯ ಸೇವಾ ಯೋಜನೆಯ ರಾಷ್ಟ್ರೀಯ ಭಾವೈಕ್ಯ ಶಿಬಿರದಲ್ಲಿ ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು ಮತ್ತು ಕರ್ನಾಟಕದ 15ಕ್ಕೂ ಹೆಚ್ಚು ವಿಶ್ವವಿದ್ಯಾಲಯಗಳ ಸುಮಾರು 159 ಸ್ವಯಂ ಸೇವಕಿಯರು ಹಾಗೂ ಕಾರ್ಯಕ್ರಮಾಧಿಕಾರಿಗಳು ಭಾಗವಹಿಸಿದ್ದರು.

ಶಿಬಿರಾರ್ಥಿಗಳಿಗೆ ಪ್ರತಿದಿನ ಯೋಗಾಸನ, ವ್ಯಾಯಾಮ, ಜುಂಬಾ ನೃತ್ಯಗಳನ್ನು ಏರ್ಪಡಿಸುವ ಮೂಲಕ ಆರೋಗ್ಯಕರ ಜೀವನ ಶೈಲಿ ರೂಢಿಸಿಕೊಳ್ಳಲು ಉತ್ತೇಜನ ನೀಡಲಾಯಿತು.

ಕೋಮು ಸೌಹಾರ್ದ, ವ್ಯಕ್ತಿತ್ವ ವಿಕಸನ, ಮಹಿಳೆ ಮತ್ತು ಮಾಧ್ಯಮ, ಮಹಿಳೆ ಮತ್ತು ಆರೋಗ್ಯ, ಯುವತಿಯರಿಗೆ ಪೌಷ್ಟಿಕ ಆಹಾರ, ಪರಿಸರ ಮತ್ತು ಜಲ ಸಂರಕ್ಷಣೆ, ರಾಷ್ಟ್ರೀಯ ಏಕತೆಯ ಮಹತ್ವ, ಭಾರತ ಸಂವಿಧಾನ ಮತ್ತು ಯುವಜನತೆ, ಮಹಿಳಾ ಸಬಲೀಕರಣ ಮತ್ತು ಉದ್ಯಮಶೀಲತೆ ವಿಷಯಗಳ ಕುರಿತು ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸ ಆಯೋಜಿಸಲಾಗಿತ್ತು.

ಶಿಬಿರಾರ್ಥಿಗಳಿಗೆ ಏಕವ್ಯಕ್ತಿ ಗಾಯನ ಸ್ಪರ್ಧೆ, ಸಮೂಹ ಗಾಯನ, ಚರ್ಚಾಸ್ಪರ್ಧೆ, ಮಿಮಿಕ್ರಿ, ಮೂಕಾಭಿನಯ, ನಾಟಕ, ಮೆಹಂದಿ, ಕೇಶ ವಿನ್ಯಾಸ, ಸೌಂದರ್ಯವರ್ಧಕ ಸ್ಪರ್ಧೆ, ಸಮೂಹ ನೃತ್ಯ, ಪ್ರಬಂಧ ಸ್ಪರ್ಧೆ, ಭಿತ್ತಿಪತ್ರ, ಕೊಲಾಜ್ ಸ್ಪರ್ಧೆ, ಸಾಂಸ್ಕೃತಿಕ ಉಡುಗೆ-ತೊಡುಗೆ ಸ್ಪರ್ಧೆಗಳ ಮೂಲಕ ಅವರ ಪ್ರತಿಭೆ ಪ್ರದರ್ಶಿಸಲು ಅವಕಾಶ ಕಲ್ಪಿಸಲಾಗಿತ್ತು.

ಪ್ರತಿನಿತ್ಯ ಸಂಜೆ ವಿವಿಧ ರಾಜ್ಯಗಳ ಶಿಬಿರಾರ್ಥಿಗಳು ಅವರ ಸಂಸ್ಕೃತಿ ಪ್ರತಿಬಿಂಬಿಸುವ ವೇಷಭೂಷಣ ಧರಿಸಿ ನೃತ್ಯ, ಜನಪದ, ಗಾಯನ, ನಾಟಕ, ಜನ ಜಾಗೃತಿ ಮೂಡಿಸುವ ಅನೇಕ ಕಾರ್ಯಕ್ರಮಗಳನ್ನು ಪ್ರದರ್ಶಿಸಿದರು.

ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಬಿ.ಕೆ.ತುಳಸಿಮಾಲಾ ಮತ್ತು ಮೌಲ್ಯಮಾಪನ ಕುಲಸಚಿವ ಕೆ.ರಮೇಶ್ ಅವರ ಸಮ್ಮುಖದಲ್ಲಿ ಶಿಬಿರಾರ್ಥಿಗಳು ಸುಮಾರು 60 ಗಿಡಗಳನ್ನು ವಸತಿನಿಲಯದ ಆವರಣದಲ್ಲಿ ನೆಟ್ಟು ನೀರುಣಿಸಿದರು.

ವಿಶ್ವವಿದ್ಯಾಲಯದ ಸಮೀಪವೇ ಇರುವ ತೊರವಿ ತಾಂಡಾಕ್ಕೆ ಶಿಬಿರಾರ್ಥಿಗಳು ಭೇಟಿ ನೀಡಿ, ಹೆಣ್ಣು ಮಕ್ಕಳನ್ನು ಉಳಿಸಿ-ಹೆಣ್ಣುಮಕ್ಕಳನ್ನು ಓದಿಸಿ, ಜಲ ಮತ್ತು ಪರಿಸರ ಸಂರಕ್ಷಣೆ, ಬಾಲ್ಯವಿವಾಹ, ಸ್ವಚ್ಛ ಭಾರತದ ಬಗ್ಗೆ ಅರಿವು ಮೂಡಿಸಿದರು ಮತ್ತು ಭಿತ್ತಿಪತ್ರಗಳನ್ನು ಅಂಟಿಸಿದರು. ತೊರವಿ ಗ್ರಾಮ ಪಂಚಾಯ್ತಿಗೆ ಭೇಟಿ ನೀಡಿ, ಅಧಿಕಾರಿಗಳು ಮತ್ತು ಸದಸ್ಯರ ಬಳಿ ಗ್ರಾಮೀಣಾಭಿವೃದ್ಧಿ ಬಗ್ಗೆ ಚರ್ಚಿಸಿದರು.

ವಿಜಯಪುರದ ಪ್ರೇಕ್ಷಣೀಯ ಸ್ಥಳಗಳಾದ ವಿಶ್ವಪ್ರಸಿದ್ಧ ಗೋಳಗುಮ್ಮಟ, ಬಾರಾಕಮಾನ್, ಸಂಗೀತ ಮಹಲ್, ಉಪಲಿ ಬುರ್ಜ್‌ಗೆ ಭೇಟಿ ನೀಡಿ ಸ್ತ್ರೀಶಿಕ್ಷಣ, ಪರಿಸರ ಸಂರಕ್ಷಣೆ, ಧೂಮಪಾನ, ಹೆಣ್ಣು ಭ್ರೂಣ ಹತ್ಯೆ ಬಗ್ಗೆ ಅರಿವು ಮೂಡಿಸುವ ಭಿತ್ತಿಪತ್ರಗಳನ್ನು ಪ್ರದರ್ಶಿಸಿದರು.

ವಿಶ್ವವಿದ್ಯಾಲಯದ ಆಡಳಿತ ಭವನದ ಮುಂಭಾಗದಲ್ಲಿ ಭಾರತದ ಬೃಹತ್ ನಕ್ಷೆಯನ್ನು ರಚಿಸುವ ಮೂಲಕ ರಾಷ್ಟ್ರೀಯ ಭಾವೈಕ್ಯತಾ ಪ್ರತಿಜ್ಞೆ ಕೈಗೊಂಡರು. ನಕ್ಷೆಯ ಗಡಿಯುದ್ದಕ್ಕೂ ದೀಪಗಳನ್ನು ಜೋಡಿಸಿದ ದೃಶ್ಯ ದೇಶದ ಅಖಂಡತೆಗೆ ಸಾಕ್ಷಿಯಾಗಿತ್ತು.

ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ವೀರಯೋಧರನ್ನು ಸ್ಮರಿಸುವ ಸ್ವಾತಂತ್ರ್ಯ ಹೋರಾಟಗಾರರ ಭಿತ್ತಿಪತ್ರಗಳನ್ನು ಹಿಡಿದು ಮೆರವಣಿಗೆ ಮಾಡಿ ಗೌರವ ಸಲ್ಲಿಸಲಾಯಿತು ಎಂದು ರಾಷ್ಟ್ರೀಯ ಸೇವಾ ಯೋಜನೆಯ ಸಂಯೋಜನಾಧಿಕಾರಿ ಪ್ರೊ.ನಾಮದೇವ ಎಂ.ಗೌಡಾ 'ಪ್ರಜಾವಾಣಿ'ಗೆ ತಿಳಿಸಿದರು.



ವಿಜಯಪುರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದಲ್ಲಿ ಆಯೋಜಿಸಲಾಗಿದ್ದ ರಾಷ್ಟ್ರೀಯ ಸೇವಾ ಯೋಜನೆಯ ರಾಷ್ಟ್ರೀಯ ಭಾವೈಕ್ಯ ಶಿಬಿರದಲ್ಲಿ ಪಾಲ್ಗೊಂಡಿದ್ದ ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು ಮತ್ತು ಕರ್ನಾಟಕದ ಸ್ವಯಂ ಸೇವಕಿಯರು ಗೋಳಗುಮ್ಮಟಕ್ಕೆ ಭೇಟಿ ನೀಡಿದ ಸಂದರ್ಭ

**ಮುಖ್ಯಾಂಶಗಳು**

- ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ನೀಡಿದ ಶಿಬಿರಾರ್ಥಿಗಳು
- ತೊರವಿ ತಾಂಡಾದಲ್ಲಿ ಜಾಗೃತಿ ಅಭಿಯಾನ
- ವಿ.ವಿ ಆವರಣದಲ್ಲಿ 60 ಗಿಡಗಳನ್ನು ನೆಟ್ಟ ಸ್ವಯಂ ಸೇವಕಿಯರು

**ಕ್ಯಾಂಪಸ್ ಒಳಗೊಂದು ಸುತ್ತು**

RPS
03/04/21

3/4/21

7.1.9 (2C)

## ಬಬಲೇಶ್ವರ ತಾಲ್ಲೂಕು ಸಾರವಾಡದಲ್ಲಿ ಆಯೋಜನೆ

# ಎನ್‌ಎಸ್‌ಎಸ್ ವಿಶೇಷ ಶಿಬಿರ ನಾಳೆಯಿಂದ

ವಿಜಯಪುರ: ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಶಿಕ್ಷಣ ಅಧ್ಯಯನ ವಿಭಾಗ ರಾಷ್ಟ್ರೀಯ ಸೇವಾ ಯೋಜನೆ ಘಟಕದ ವತಿಯಿಂದ ಸುವರ್ಣ ಮಹೋತ್ಸವದ ಅಮೃತ ಸಮುದಾಯ ಅಭಿವೃದ್ಧಿ ಅಡಿಯಲ್ಲಿ ಮಾರ್ಚ್ 21ರಿಂದ 27ರ ವರೆಗೆ ಬಬಲೇಶ್ವರ ತಾಲ್ಲೂಕು ಸಾರವಾಡ ಗ್ರಾಮದಲ್ಲಿ ಎನ್‌ಎಸ್‌ಎಸ್ ವಾರ್ಷಿಕ ವಿಶೇಷ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ.

ಮಹಿಳಾ ವಿವಿ ಕುಲಪತಿ ಪ್ರೊ.ಬಿ.ಕೆ. ತುಳಸಿಮಾಲಾ ಶಿಬಿರ ಉದ್ಘಾಟಿಸಲಿದ್ದು, ಕುಲಸಚಿವ ಎಂ.ಎನ್.ಚೋರಗಸ್ತಿ ಅಧ್ಯಕ್ಷತೆ ವಹಿಸಲಿದ್ದಾರೆ. ಗ್ರಾಮ ಪಂಚಾಯಿತಿ ಅಧ್ಯಕ್ಷೆ ಸುವರ್ಣಾ ನಾಟೀಕಾರ, ಎನ್‌ಎಸ್‌ಎಸ್ ಕಾರ್ಯಕ್ರಮ ಸಂಯೋಜನಾಧಿಕಾರಿ ಪ್ರೊ.ನಾಮದೇವಗೌಡ, ರುದ್ರಮುನಿ ಸ್ವಾಮೀಜಿ, ದೀಪಾ ಲಗಳಿ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

### ಕಾರ್ಯಕ್ರಮ ವಿವರ

ಮಾ.22ರಂದು ಮಧ್ಯಾಹ್ನ 3.30ಕ್ಕೆ ಗ್ರಾಮೀಣ ನೈರ್ಮಲ್ಯ ಮತ್ತು ಆರೋಗ್ಯ ವಿಷಯದ ಕುರಿತು ಡಾ.ಕಲಾವತಿ ಕಾಂಬಳೆ ಮಾತನಾಡಲಿದ್ದು, ಡಾ.ಯು.ಕೆ.ಕುಲಕರ್ಣಿ ಅಧ್ಯಕ್ಷತೆ ವಹಿಸಲಿದ್ದಾರೆ. 23ರಂದು ಮಧ್ಯಾಹ್ನ 3.30ಕ್ಕೆ ಡಿಜಿಟಲ್ ಇಂಡಿಯಾ ಮತ್ತು ಭಾರತದ ಆರ್ಥಿಕ ಚಿಂತನೆ ಕುರಿತು ಡಾ.ಆರ್.ವಿ.ಗಂಗಶೆಟ್ಟಿ ಉಪನ್ಯಾಸ ನೀಡಲಿದ್ದು, ಪ್ರೊ.ಡಿ.ಎಂ. ಮದರಿ ಅಧ್ಯಕ್ಷತೆ ವಹಿಸಲಿದ್ದಾರೆ.

24ರಂದು ಮಧ್ಯಾಹ್ನ 3.30ಕ್ಕೆ ಗ್ರಾಮೀಣ ಮಹಿಳಾ ಜೀವನದ ಆತಂಕಗಳು ವಿಷಯದ ಕುರಿತು ಪ್ರೊ.ಆರ್.ಸುನಂದಮ್ಮ ಹಾಗೂ ಡಾ.ಲಕ್ಷ್ಮೀದೇವಿ.ವೈ ಮಾತನಾಡಲಿದ್ದು, ಡಾ.ಎಂ.ಪಿ.ಬಳಿಗಾರ, ಡಾ.ಗವಿಸಿದ್ದಪ್ಪ ಆನಂದಳ್ಳಿ ಅಧ್ಯಕ್ಷತೆ ವಹಿಸಲಿದ್ದಾರೆ. 25ರಂದು ಮಧ್ಯಾಹ್ನ 3.30ಕ್ಕೆ ಗ್ರಾಮೀಣ ಅಭಿವೃದ್ಧಿಯಲ್ಲಿ ಸಮುದಾಯದ ಪಾತ್ರ ವಿಷಯದ ಕುರಿತು ಡಾ.ಗಂಗಾಧರ ಸೋನಾರ ಉಪನ್ಯಾಸ ನೀಡಲಿದ್ದು, ಡಾ.ಎ.ಬಿ. ಸುರಪುರ ಅಧ್ಯಕ್ಷತೆ ವಹಿಸಲಿದ್ದಾರೆ.

26 ರಂದು ಮಧ್ಯಾಹ್ನ 3.30ಕ್ಕೆ ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು ಕ್ರೀಡಾ ಶಿಕ್ಷಣ ವಿಷಯದ ಕುರಿತು ಡಾ.ಹನುಮಂತಯ್ಯ ಪೂಜಾರಿ ಮಾತನಾಡಲಿದ್ದು, ಪ್ರೊ.ಡಿ.ಎಂ. ಜ್ಯೋತಿ ಅಧ್ಯಕ್ಷತೆ ವಹಿಸಲಿದ್ದಾರೆ. ಸಂಜೆ 5.30ಕ್ಕೆ ಜನಜಾಗೃತಿ ಅಭಿಯಾನ ನಡೆಯಲಿದೆ.

27 ರಂದು ಮಧ್ಯಾಹ್ನ 11.30ಕ್ಕೆ ಸಮಾರೋಪ ಮತ್ತು ಅಭಾರ ಮನ್ನಣೆ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಎನ್‌ಎಸ್‌ಎಸ್ ಶಿಕ್ಷಣ ವಿಭಾಗ ಘಟಕದ ಕಾರ್ಯಕ್ರಮಾಧಿಕಾರಿ ಡಾ.ವಿಷ್ಣು ಶಿಂಧೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಜಾವಾಣಿ, ದಿ. 20/3/22, ಪು - 02

Kalaburagi

VCPS — 21-03-22

Reg. PS — 21/3/22

IQAC — 21/3/22

Event: NSS camp

Date: 21/3/22, Prajavani, Page 02

Dept: Education.

Resource person: Prof. B.K. Tulasimala ~~Shikshana~~

7.1.9 (2D)

7.1.9 (2D)



ಕಲಬುರಗಿ ಉದಯವಾಣಿ
ಸೋಮವಾರ, ಸೆಪ್ಟೆಂಬರ್ 28, 2020

# ಸ್ವಾಭಿಮಾನಕ್ಕೆ ಎನ್ನೆಸ್ಸೆಸ್ ಸಹಕಾರಿ: ಕಾಕಡೆ

ವಿಜಯಪುರ: ಸ್ವಾಭಿಮಾನದ ಪ್ರತೀಕವಾಗಿರುವ ರಾಷ್ಟ್ರೀಯ. ಸೇವಾ ಯೋಜನೆ ವಿದ್ಯಾರ್ಥಿಗಳ ಮನೋಬಲ ಹೆಚ್ಚಳ. ಕಾರ್ಯತತ್ಪರತೆ ವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸುತ್ತದೆ ಎಂದು ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಪ್ರಭಾರ ಕುಲಪತಿ ಪ್ರೊ। ಓಂಕಾರ ಕಾಕಡೆ ಅಭಿಪ್ರಾಯಪಟ್ಟರು.



ವಿಜಯಪುರ: ಎನ್ನೆಸ್ಸೆಸ್ ಕಾರ್ಯಕ್ರಮದಲ್ಲಿ ಅಕ್ಕಮಹಾದೇವಿ ಮಹಿಳಾ ವಿವಿ ಪ್ರಭಾರ ಕುಲಪತಿ ಡಾ। ಓಂಕಾರ ಕಾಕಡೆ ಮಾತನಾಡಿದರು.

ನಗರದಲ್ಲಿ ನಡೆದ ಎನ್ನೆಸ್ಸೆಸ್ ಸಂಸ್ಥಾಪನಾ ದಿನಾಚರಣೆ ಮತ್ತು ಫಿಟ್ ಇಂಡಿಯಾ ರನ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳಲ್ಲಿ ಕ್ರಿಯಾಶೀಲತೆ ರೂಪಿಸುವಲ್ಲಿ ಎನ್‌ಎಸ್‌ಎಸ್ ಸಹಕಾರಿಯಾಗಲಿದೆ ಎಂದರು.

ಪರಸ್ಪರ ಸಹಕಾರ, ಸಹಾಯ ಮತ್ತು ಮಾನವೀಯ ಗುಣಗಳನ್ನು ಹೆಚ್ಚಿಸುತ್ತದೆ. ನಮಗೆತಿಳಿಯದಪಠ್ಯೇತರ ವಿಷಯಗಳ ಕುರಿತು ಮಾಹಿತಿ ನೀಡುವ ಹಾಗೂ ಕಲಿಯಲು ನೆರವಾಗುತ್ತದೆ. ವಿದ್ಯಾರ್ಥಿ ಜೀವನದಲ್ಲೇ ಸೇವೆಯ ಜೊತೆಗೆ ನಮ್ಮ ವ್ಯಕ್ತಿತ್ವ ರೂಪಿಸಿಕೊಳ್ಳಲು ಸಹಕಾರಿಯಾಗುತ್ತದೆ ಎಂದರು.

Event: N.S.S & fit india

Date: 28/9/2020

Dept: N.N.S KSAWU Vijapura.

Res person: Dr. Omkar kakade.

O/C 28/9

VC office 28/9/2020.

7.1.9 (SD)

7.1.9 (SD)

ಕನ್ನಡಪ್ರಭ, ದಿ.12/10/21, ಪು-02

# ಇಂದು ಎನ್‌ಎಸ್‌ಎಸ್ ಸಂಸ್ಥಾಪನಾ ದಿನಾಚರಣೆ

**ವಿಜಯಪುರ:** ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ರಾಷ್ಟ್ರೀಯ ಸೇವಾ ಯೋಜನೆ ಕೋಶ ಹಾಗೂ ಯುವಜನ ಸಬಲೀಕರಣ ಮತ್ತುಕ್ರೀಡಾ ಇಲಾಖೆ ಸಹಯೋಗದಲ್ಲಿ ಅ.12 ರಂದು ಬೆಳಗ್ಗೆ 11ಕ್ಕೆ ರಾಷ್ಟ್ರೀಯ ಸೇವಾ ಯೋಜನೆಯ ಸಂಸ್ಥಾಪನಾ ದಿನ ಮತ್ತು 2020-21ನೇ ಸಾಲಿನ ರಾಷ್ಟ್ರೀಯ ಸೇವಾ ಯೋಜನೆ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ. ವಿಶ್ವವಿದ್ಯಾನಿಲಯ ಮಟ್ಟದ ಆರೆಸ್ಸೆಸ್ ಪ್ರಶಸ್ತಿ ನೀಡಲಿದ್ದು, ಅತ್ಯುತ್ತಮ ಕಾರ್ಯಕ್ರಮಾಧಿಕಾರಿ ಪ್ರಶಸ್ತಿಗೆ ಭಾಜನರಾದ ಕಲಬುರಗಿ ಎಂ.ಬಿ.ಡಿ.ಎ. ಮಹಿಳಾ ಮಹಾವಿದ್ಯಾಲಯದ ಜಾನಕಿ ಹೊಸೂರು, ಅತ್ಯುತ್ತಮ ಸ್ವಯಂಸೇವಕಿ ಪ್ರಶಸ್ತಿಗೆ ಭಾಜನರಾದ ಮಹಿಳಾ ವಿವಿ ಆಹಾರ ಸಂಸ್ಕರಣೆ ಮತ್ತು ಪೋಷಣೆ ವಿಭಾಗದ ಕು.ಮೀರಾ, ಹುಬ್ಬಳ್ಳಿಯ ಎಸ್.ಜೆ.ಎಂ.ವಿ. ಮಹಿಳಾ ಮಹಾವಿದ್ಯಾಲಯದ ಕು.ಪ್ರೇಕ್ಷಾ ತಿಮ್ಮನಗೌಡರ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುತ್ತಿದೆ.

Event: N.S.S. Establishment Day Celebration

Date: 12/10/2021, Kannada Prabha, page-02.

Resource Person: Janaki Hosuru, Ku. Meera, Ku. Preksha


Dept: N.S.S, Physical Education.

7.1.9 (20)

ಕನ್ನಡಪ್ರಭ ಡಿ. 13/10/21 ಪು-02

# ನಾಯಕತ್ವ ಗುಣ ಬೆಳೆಸುವುದೇ ಎನ್‌ಎಸ್‌ಎಸ್ ಗುರಿ: ರಮೇಶ

## ಅಕ್ಕಮಹಾದೇವಿ ಮಹಿಳಾ ವಿವಿಯಲ್ಲಿ ಎನ್‌ಎಸ್‌ಎಸ್ ಸಂಸ್ಥಾಪನೆ ದಿನಾಚರಣೆ



ಕರ್ನಾಟಕರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ರಾಷ್ಟ್ರೀಯ ಸೇವಾ ಯೋಜನೆ ಕೋಶ ಹಾಗೂ ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಸಹಯೋಗದಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಸಂಸ್ಥಾಪನಾ ದಿನ ಮತ್ತು 2020-21ನೇ ಸಾಲಿನ ರಾಷ್ಟ್ರೀಯ ಸೇವಾ ಯೋಜನೆ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿತ್ತು.

• **ಕನ್ನಡಪ್ರಭ ವಾರ್ತೆ** ವಿಜಯಪುರ

ವಿದ್ಯಾರ್ಥಿನಿಯರಲ್ಲಿ ಶಿಸ್ತು, ಸಮಯಪ್ರಜ್ಞೆ, ನಾಯಕತ್ವ ಗುಣಗಳನ್ನು ಕಲಿಸುವುದಲ್ಲದೆ ಸಾಮಾಜಿಕ ಹೊಂದಾಣಿಕೆಯನ್ನು, ದೇಶ ಭಕ್ತಿಯನ್ನು ಪ್ರೇರೆಪಿಸುವುದೇ ರಾಷ್ಟ್ರೀಯ ಸೇವಾ ಯೋಜನೆಯ ಮೂಲ ಉದ್ದೇಶ ಎಂದು ಕಲಬುರಗಿಯ ಗುಲ್ಬರ್ಗಾ ವಿಶ್ವವಿದ್ಯಾಲಯದ ಜೈವಿಕ ತಂತ್ರಜ್ಞಾನ ವಿಭಾಗದ ಪ್ರಾಧ್ಯಾಪಕ ಹಾಗೂ ರಾಷ್ಟ್ರೀಯ ಸೇವಾ ಯೋಜನೆ ಸಂಯೋಜನಾಧಿಕಾರಿ ಡಾ. ರಮೇಶ ಲಂಡನ್ಕರ್ ಹೇಳಿದರು.

ಇಲ್ಲಿಯ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ರಾಷ್ಟ್ರೀಯ ಸೇವಾ ಯೋಜನೆ ಕೋಶ ಹಾಗೂ ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಸಹಯೋಗದಲ್ಲಿ ಮಂಗಳವಾರ ಆಯೋಜಿಸಿದ್ದ ರಾಷ್ಟ್ರೀಯ ಸೇವಾ ಯೋಜನೆಯ ಸಂಸ್ಥಾಪನಾ ದಿನ ಮತ್ತು 2020-21ನೇ ಸಾಲಿನ ರಾಷ್ಟ್ರೀಯ ಸೇವಾ ಯೋಜನೆ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದರು.

ಈ ಯೋಜನೆಯು ವಿದ್ಯಾರ್ಥಿನಿಯರಲ್ಲಿ ನಾಯಕತ್ವದ ಗುಣಗಳನ್ನು ಬೆಳೆಸಲು ಸಹಾಯಕಾರಿಯಾಗಿದೆ. ಜೊತೆಗೆ ಯಾವುದೇ ಸಮಸ್ಯೆ ಬಂದರೂ ಅದನ್ನು ಧೈರ್ಯವಾಗಿ ಎದುರಿಸುವ ಶಕ್ತಿಯನ್ನು ತುಂಬುತ್ತದೆ ಎಂದರು.

ಕುಲಸಚಿವೆ ಪ್ರೊ.ಆರ್.ಸುನಂದಮ್ಮ ಮಾತನಾಡಿ, ಸಾಮಾಜಿಕ ಅರಿವು, ತಿಳುವಳಿಕೆ ಮತ್ತು ಸಾಮಾಜಿಕ ಜವಾಬ್ದಾರಿಯನ್ನು ನಿರ್ವಹಿಸಲು ಬೇಕಾಗುವಂತಹ ವಿಷಯಗಳನ್ನು ಕಲಿತುಕೊಳ್ಳಲು ವಿದ್ಯಾರ್ಥಿನಿಯರಿಗೆ ಎನ್.ಎಸ್.ಎಸ್ ಒಂದು ಉತ್ತಮ ಸಾಧನವಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿನಿಯರು ಇದರಲ್ಲಿ ಪಾಲ್ಗೊಳ್ಳಬೇಕು ಎಂದು ಕರೆ ನೀಡಿದರು.

ವಿಶ್ವವಿದ್ಯಾನಿಲಯದ ಎನ್.ಎಸ್.ಎಸ್ ಕೋಶ ಇನ್ನೂ ಹೆಚ್ಚು ಸ್ವಯಂ ಸೇವಕಿಯರನ್ನು ಹೊಂದಲಿ ಎಂದು ಆಶಿಸುತ್ತಾ, ಎನ್.ಎಸ್.ಎಸ್ ಕೋಶದಲ್ಲಿ ಠೇವಣಿ ಇಡಲು ₹10,000 ಗಳ ಚೆಕ್‌ನ್ನು ಕುಲಪತಿಗೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಮಹಿಳಾ ವಿವಿಯ ಕುಲಪತಿ ಪ್ರೊ.ಬಿ.ಕೆ.ತುಳಸಿಮಾಲ, ಇಂದಿನ ಸ್ಪರ್ಧಾತ್ಮಕ ದಿನಗಳಲ್ಲಿ ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಬದ್ಧತೆಯು ಅವಶ್ಯಕವಾಗಿಬೇಕಾಗಿದೆ. ಈ ದಿಸೆಯಲ್ಲಿ ಎನ್.ಎಸ್.ಎಸ್ ಪ್ರೇರಣೆ ನೀಡುವಂತದ್ದಾಗಿದೆ. ಶ್ರಮದಾನದ ಮೂಲಕ ಸ್ವಚ್ಛತೆಯ ಅರಿವು, ಸಹಕಾರ ಮನೋಭಾವ ವೃದ್ಧಿಗೊಳ್ಳುತ್ತದೆ. ನಮ್ಮ ಸಾಮಾಜಿಕ ಜವಾಬ್ದಾರಿಗಳ ಬಗ್ಗೆ ತಿಳುವಳಿಕೆ ಉಂಟಾಗಿ ದೇಶ ಪ್ರೇಮ ಹೆಚ್ಚುತ್ತದೆ. ಇದರ ಮೂಲಕ ನಮ್ಮ ಪ್ರಾದೇಶಿಕ ಸಂಸ್ಕೃತಿಗಳನ್ನು ವಿನಿಮಯ ಮಾಡಿಕೊಳ್ಳುವ ಮೂಲಕ ನಮ್ಮ ಸಂಸ್ಕೃತಿ ಸಂಸ್ಕಾರಗಳನ್ನು ಇನ್ನೂ ಶ್ರೀಮಂತಗೊಳಿಸಬಹುದಾಗಿದೆ ಎಂದರು.

ಇದೇ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯ ಮಟ್ಟದ ರಾಷ್ಟ್ರೀಯ ಸೇವಾ ಯೋಜನೆ ಪ್ರಶಸ್ತಿಯ ಅಡಿಯಲ್ಲಿ ಅತ್ಯುತ್ತಮ ಕಾರ್ಯಕ್ರಮಾಧಿಕಾರಿ ಪ್ರಶಸ್ತಿಗೆ ಭಾಜನರಾದ ಕಲಬುರಗಿ ಎಂ.ಬಿ.ಡಿ.ಎ. ಮಹಿಳಾ ಮಹಾವಿದ್ಯಾಲಯದ ಜಾನಕಿ ಹೊಸೂರು ಹಾಗೂ ಅತ್ಯುತ್ತಮ ಸ್ವಯಂ ಸೇವಕಿ ಪ್ರಶಸ್ತಿಗೆ ಭಾಜನರಾದ ಮಹಿಳಾ ವಿವಿಯ ಆಹಾರ ಸಂಸ್ಕರಣೆ ಮತ್ತು ಪೋಷಣೆ ವಿಭಾಗದ ಕು. ಮೀರಾ ಹಾಗೂ ಹುಬ್ಬಳ್ಳಿಯ ಎಸ್.ಜೆ.ಎಮ್.ವಿ. ಮಹಿಳಾ ಮಹಾವಿದ್ಯಾಲಯದ ಪ್ರೇಕ್ಷಾ ತಿಮ್ಮನಗೌಡರ ಅವರಿಗೆ ಪ್ರಶಸ್ತಿಪತ್ರ ಮತ್ತು ನಗದು ಬಹುಮಾನವನ್ನು ನೀಡುವ ಮೂಲಕ ಸತ್ಕರಿಸಲಾಯಿತು.

ಕಾರ್ಯಕ್ರಮದಲ್ಲಿ ವಿವಿಧ ವಿಭಾಗಗಳ ಮುಖ್ಯಸ್ಥರು, ಪ್ರಾಧ್ಯಾಪಕರು, ಸಂಶೋಧನಾ ಮತ್ತು ಸ್ನಾತಕೋತ್ತರ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

ರಾಷ್ಟ್ರೀಯ ಸೇವಾ ಯೋಜನೆ ಕೋಶದ ಕಾರ್ಯಕ್ರಮ ಸಂಯೋಜನಾಧಿಕಾರಿ ಪ್ರೊ.ನಾಮದೇವಗೌಡ ಸ್ವಾಗತಿಸಿ, ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಅಕ್ಷಯ ಯಾರ್ದಿ ನಿರೂಪಿಸಿದರು. ಡಾ.ಕಲಾವತಿ ಕಾಂಬಳೆ ವಂದಿಸಿದರು.

Event: NSS ~~Esta~~ Yajana.

Date: 13/10/21, Kannada Prabha, Page2.

Dept: Dept of Physical Education.

Source person: Dr. Ramesh Landonkar.

7.1.9 (2D)

ಅಕ್ಕಮಹಾದೇವಿ ಮಹಿಳಾ ವಿ.ವಿಯಲ್ಲಿ ಕಾರ್ಯಕ್ರಮ

ಪ್ರಜಾವಾಣಿ, ದಿ. 13/10/21, ಪು-3

# ‘ನಾಯಕತ್ವ ಬೆಳೆಸಲು ಎನ್‌ಎಸ್‌ಎಸ್ ಸಹಕಾರಿ’

ಪ್ರಜಾವಾಣಿ ವಾರ್ತೆ

- ಸಮಸ್ಯೆ ಎದುರಿಸುವ ಧೈರ್ಯ ಕೊಡುವ ಎನ್‌ಎಸ್‌ಎಸ್
- 2020-21ನೇ ಸಾಲಿನ ರಾಷ್ಟ್ರೀಯ ಸೇವಾ ಯೋಜನೆ ಪ್ರಶಸ್ತಿ ಪ್ರದಾನ
- ಠೇವಣಿ ಇಡಲು ₹10 ಸಾವಿರ ಕುಲಪತಿಗೆ ಹಸ್ತಾಂತರ

ವಿಜಯಪುರ: ಸಾಮಾಜಿಕ ಹೊಂದಾಣಿಕೆ, ದೇಶ ಭಕ್ತಿ ಪ್ರೇರೆಪಿಸುವುದೇ ರಾಷ್ಟ್ರೀಯ ಸೇವಾ ಯೋಜನೆಯ ಮೂಲ ಉದ್ದೇಶ ಎಂದು ಕಲಬುರಗಿಯ ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ.ರಮೇಶ ಲಂಡನ್ಕರ್ ಹೇಳಿದರು.

ಇಲ್ಲಿಯ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದಲ್ಲಿ ಮಂಗಳವಾರ ರಾಷ್ಟ್ರೀಯ ಸೇವಾ ಯೋಜನೆ ಕೋಶ ಹಾಗೂ ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ನಡೆದ ರಾಷ್ಟ್ರೀಯ ಸೇವಾ ಯೋಜನೆಯ ಸಂಸ್ಥಾಪನಾ ದಿನ ಮತ್ತು 2020-21ನೇ ಸಾಲಿನ ರಾಷ್ಟ್ರೀಯ ಸೇವಾ ಯೋಜನೆ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಈ ಯೋಜನೆಯು ವಿದ್ಯಾರ್ಥಿನಿಯರಲ್ಲಿ ನಾಯಕತ್ವದ ಗುಣಗಳನ್ನು ಬೆಳೆಸಲು ಸಹಾಯ ಕಾರಿಯಾಗಿದೆ. ಜೊತೆಗೆ ಯಾವುದೇ ಸಮಸ್ಯೆ ಬಂದರೂ, ಅದನ್ನು ಧೈರ್ಯವಾಗಿ ಎದುರಿಸುವ ಶಕ್ತಿಯನ್ನು ತುಂಬುತ್ತದೆ ಎಂದರು.

ಕುಲಸಚಿವೆ ಪ್ರೊ.ಆರ್.ಸುನಂದಮ್ಮ ಮಾತನಾಡಿ, ಸಾಮಾಜಿಕ ಅರಿವು, ತಿಳಿವಳಿಕೆ ಮತ್ತು ಸಾಮಾಜಿಕ ಜವಾಬ್ದಾರಿಯನ್ನು ನಿರ್ವಹಿಸಲು ಬೇಕಾಗುವಂತಹ ವಿಷಯಗಳನ್ನು ಕಲಿತು ಕೊಳ್ಳಲು ವಿದ್ಯಾರ್ಥಿನಿಯರಿಗೆ ಎನ್‌ಎಸ್‌ಎಸ್ ಉತ್ತಮ ಸಾಧನವಾಗಿದೆ ಎಂದರು. ಎನ್.ಎಸ್.ಎಸ್ ಕೋಶದಲ್ಲಿ ಠೇವಣಿ ಇಡಲು ₹10 ಸಾವಿರ ಚೆಕ್ ಕುಲಪತಿಗೆ ನೀಡಿದರು.



ವಿಜಯಪುರದಲ್ಲಿ ನಡೆದ ಎನ್‌ಎಸ್‌ಎಸ್ ಸಂಸ್ಥಾಪನಾ ದಿನ ಸಮಾರಂಭದಲ್ಲಿ ಪ್ರಾಧ್ಯಾಪಕ ಡಾ.ರಮೇಶ ಲಂಡನ್ಕರ್ ಮಾತನಾಡಿದರು

ಮಹಿಳಾ ವಿವಿಯ ಕುಲಪತಿ ಪ್ರೊ.ಬಿ.ಕೆ.ತುಳಸಿಮಾಲ ಅಧ್ಯಕ್ಷತೆ ವಹಿಸಿದ್ದರು. ವಿಶ್ವವಿದ್ಯಾಲಯ ಮಟ್ಟದ ರಾಷ್ಟ್ರೀಯ ಸೇವಾ ಯೋಜನೆ ಪ್ರಶಸ್ತಿಯ ಅಡಿಯಲ್ಲಿ ಅತ್ಯುತ್ತಮ ಕಾರ್ಯಕ್ರಮಾಧಿಕಾರಿ ಪ್ರಶಸ್ತಿಗೆ ಭಾಜನರಾದ ಕಲಬುರಗಿ ಎಂ.ಬಿ. ಡಿ.ಎ. ಮಹಿಳಾ ಮಹಾವಿದ್ಯಾಲಯದ ಜಾನಕಿ ಹೊಸೂರು, ಅತ್ಯುತ್ತಮ ಸ್ವಯಂ ಸೇವಕಿ ಪ್ರಶಸ್ತಿಗೆ ಭಾಜನರಾದ ಮಹಿಳಾ ವಿವಿಯ ಆಹಾರ ಸಂಸ್ಕರಣೆ ಮತ್ತು ಪೋಷಣೆ ವಿಭಾಗದ ಮೀರಾ ಹಾಗೂ ಹುಬ್ಬಳ್ಳಿಯ ಎಸ್.ಜೆ.ಎಂ.ವಿ ಮಹಿಳಾ ಮಹಾವಿದ್ಯಾಲಯದ ಪ್ರೇಕ್ಷಾ ತಿಮ್ಮನಗೌಡರ ಅವರಿಗೆ ಪ್ರಶಸ್ತಿ ಪತ್ರ ಮತ್ತು ನಗದು ಬಹುಮಾನ ನೀಡಿ ಸತ್ಕರಿಸಲಾಯಿತು.

ವಿವಿಧ ವಿಭಾಗಗಳ ಮುಖ್ಯಸ್ಥರು, ಪ್ರಾಧ್ಯಾಪಕರು, ಸಂಶೋಧನಾ ಮತ್ತು ಸ್ನಾತಕೋತ್ತರ ವಿದ್ಯಾರ್ಥಿನಿಯರು ಇದ್ದರು. ರಾಷ್ಟ್ರೀಯ ಸೇವಾ ಯೋಜನೆ ಕೋಶದ ಕಾರ್ಯಕ್ರಮ ಸಂಯೋಜನಾಧಿಕಾರಿ ಪ್ರೊ. ನಾಮದೇವ ಗೌಡ ಸ್ವಾಗತಿಸಿದರು. ಡಾ. ಕಲಾವತಿ ಕಾಂಬಳೆ ವಂದಿಸಿದರು. ಅಕ್ಷಯ ಯಾರ್ದಿ ನಿರೂಪಿಸಿದರು.

13/10/21

Event: Celebration of NSS foundation day.
Date: 13.10.21.
Resource person: Dr. Ramesh. Landakar.
Dept: NSS wing

13/10/21

RPS 13/10/2021

7.1.9 (2E)

7.1.9(2E)

ಪ್ರಜಾವಾಣಿ ಗುರುವಾರ • ಏಪ್ರಿಲ್ 27, 2017

ent: National Youth
ader award ceremony
e:27/04/2017



ವಿಜಯಪುರದ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಜ್ಞಾನಶಕ್ತಿ ಆವರಣದಲ್ಲಿ ಬುಧವಾರ ನಡೆದ ರಾಷ್ಟ್ರೀಯ ಯುವನಾಯಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ನಗರ ಶಾಸಕ ಡಾ.ಮಕ್ಬೂಲ್ ಬಾಗವಾನ, ಇಂಡಿ ಶಾಸಕ ಯಶವಂತರಾಯಗೌಡ ಪಾಟೀಲ ಪ್ರಶಸ್ತಿ ವಿಜೇತರನ್ನು ಸನ್ಮಾನಿಸಿದರು. ಕುಲಸಚಿವ ಪ್ರೊ.ಕೆ.ಪಿ.ಶ್ರೀನಾಥ್, ಯುವ ಮುಖಂಡ ಜಾವೀದ ಜಮಾದಾರ, ಕುಲಪತಿ ಪ್ರೊ.ಸಬಿಹಾ, ಪ್ರೊ.ಆರ್.ಸುನಂದಮ್ಮ ಇದ್ದಾರೆ

### ರಾಷ್ಟ್ರೀಯ ಯುವನಾಯಕ ಪ್ರಶಸ್ತಿ ಪ್ರದಾನ ಸಮಾರಂಭ

# ‘ಸಮಾಜ ಸೇವೆ ಸಾಮಾಜಿಕ ಶ್ರಮದಾನವಾಗಲಿ’

ಪ್ರಜಾವಾಣಿ ವಾರ್ತೆ

**ವಿಜಯಪುರ:** ಸಮಾಜ ಸೇವೆ ಫ್ಯಾಶನ್ ಆಗದೆ ಸಾಮಾಜಿಕ ಶ್ರಮದಾನವಾಗಬೇಕು ಎಂದು ನಗರಾಭಿವೃದ್ಧಿ ಇಲಾಖೆಯ ಸಂಸದೀಯ ಕಾರ್ಯದರ್ಶಿ ಡಾ.ಮಕ್ಬೂಲ್ ಬಾಗವಾನ ಹೇಳಿದರು.

ಇಲ್ಲಿನ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಜ್ಞಾನಶಕ್ತಿ ಆವರಣದಲ್ಲಿ ಕೇಂದ್ರ ಸರ್ಕಾರದ ಯುವ ಕಾರ್ಯ ಮತ್ತು ಕ್ರೀಡಾ ಸಚಿವಾಲಯ, ವಿ.ವಿ.ಯ ರಾಷ್ಟ್ರೀಯ ಸೇವಾ ಯೋಜನೆ ಕೋಶಗಳ ವತಿಯಿಂದ ಬುಧವಾರ ನಡೆದ 2015-2016ನೇ ಸಾಲಿನ ರಾಷ್ಟ್ರೀಯ ಯುವ ನಾಯಕ ಪ್ರಶಸ್ತಿ ವಿತರಣಾ ಸಮಾರಂಭದಲ್ಲಿ ಅವರು ಮಾತನಾಡಿದರು.

‘ದೇಶ ಶೈಕ್ಷಣಿಕವಾಗಿ ಅಭಿವೃದ್ಧಿಯಾಗಬೇಕಾದರೆ ಪ್ರತಿಯೊಬ್ಬ ಪ್ರಜೆಯೂ ದೇಶ ನನಗೇನು ಕೊಟ್ಟಿತು ಎನ್ನುವ ಬದಲು ದೇಶಕ್ಕಾಗಿ ನಾನೇನು ಕೊಟ್ಟೆ ಎನ್ನುವುದನ್ನು ಸ್ಮರಿಸಿಕೊಂಡಾಗ ಮಾತ್ರ ದೇಶ ಅಭಿವೃದ್ಧಿ ಹೊಂದಲು ಸಾಧ್ಯ’ ಎಂದು ತಿಳಿಸಿದರು.

ರಾಷ್ಟ್ರಮಟ್ಟದ ಪ್ರಶಸ್ತಿ ಪ್ರದಾನ ಮಾಡಿದ ಶಾಸಕ ಯಶವಂತರಾಯಗೌಡ ಪಾಟೀಲ ಮಾತನಾಡಿ ಸಂಘ, ಸಂಸ್ಥೆ ಅಥವಾ ಕುಟುಂಬದಿಂದ ಪಡೆದ ಉತ್ತಮ ಸಂಸ್ಕಾರ, ಸಂಸ್ಕೃತಿಗಳ ಅಭಿವೃದ್ಧಿಯಿಂದ ಮಾತ್ರ ದೇಶದ ಬೆಳವಣಿಗೆ ಸಾಧ್ಯ ಎಂದರು.

ಯುವಕರು ದೇಶದ ಶಕ್ತಿಯಾಗಿದ್ದು ಈ ನಿಟ್ಟಿನಲ್ಲಿ ಸಾಧ್ಯವಾದಷ್ಟು ಬದಲಾವಣೆ ಕಡೆಗೆ ಮುಖ ಮಾಡಿ ತಮ್ಮ ನಾಯಕತ್ವ ಗುಣ ಮತ್ತು ಸೇವಾ ಭಾವನೆ ಬೆಳೆಸಿಕೊಂಡು ಸಮಾಜದಲ್ಲಿ ಆದರ್ಶವಾಗುವಂತಹ ಕಾರ್ಯಗಳನ್ನು ಮಾಡಬೇಕು ಎಂದರು.

> **ದೇಶದ ಸಾಮಾಜಿಕ, ರಾಜಕೀಯ ಚಟುವಟಿಕೆಗಳ ಯಶಸ್ಸಿನಲ್ಲಿ ಯುವಜನರ ಪಾತ್ರ ಮಹತ್ವದ್ದಾಗಿದ್ದು, ಭಾರತವನ್ನು ಯುವ ಜನತೆ ಮಾತ್ರ ಸದೃಢಗೊಳಿಸಲು ಸಾಧ್ಯ**
>
> **ಡಾ.ಮಕ್ಬೂಲ್ ಬಾಗವಾನ**
> ನಗರ ಶಾಸಕ

ರಾಷ್ಟ್ರೀಯ ಸೇವಾ ಯೋಜನೆಯ ಕರ್ನಾಟಕ ವಲಯ ಪ್ರಾದೇಶಿಕ ನಿರ್ದೇಶಕ ಅರುಣ ಪೂಜಾರ ಮಾತನಾಡಿ ದೇಶದ ಅಭಿವೃದ್ಧಿ ಕೇವಲ ಪಕ್ಷ ಮತ್ತು ಸರ್ಕಾರದ ಯೋಜನೆಗಳಲ್ಲಿಲ್ಲ. ಅದು ಇಂದಿನ ಯುವಕರಲ್ಲಿದೆ. ವಿಶ್ವವೇ ಸ್ಪರ್ಧಾತ್ಮಕ ಯುಗದಲ್ಲಿರುವ ಕಾಲಘಟ್ಟದಲ್ಲಿ ಶಿಕ್ಷಣ ಕಲಿಕೆ, ಬೋಧನೆ, ಸಂಶೋಧನೆಗೆ, ಅಂಕ ಗಳಿಕೆಗೆ ಮಾತ್ರ ಸೀಮಿತವಾಗದೆ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸುವ ಮೂಲಕ ನಾಯಕತ್ವ ಗುಣ, ಮೌಲ್ಯ, ಶಿಸ್ತನ್ನು ಬೆಳೆಸುವಂತಾಗಬೇಕು ಎಂದು ಪ್ರತಿಪಾದಿಸಿದರು.

ಯುವಕರು ದೇಶಕ್ಕಾಗಿ ಚಿಂತಿಸುವ, ಸೇವೆ ಸಲ್ಲಿಸುವ ಮಹತ್ತರ ಸಾಧನೆ ಮಾಡುವತ್ತ ಹಾತೊರೆಯಬೇಕು ಎಂದು ಸಲಹೆ ನೀಡಿದರು.

ಯುವ ಮುಖಂಡ ಜಾವೀದ ಜಮಾದಾರ ಮಾತನಾಡಿದರು. ಕುಲಪತಿ ಪ್ರೊ.ಸಬಿಹಾ ಅಧ್ಯಕ್ಷತೆ ವಹಿಸಿದ್ದರು.

ವಿ.ವಿ.ಕುಲಸಚಿವ ಪ್ರೊ.ಕೆ.ಪಿ.ಶ್ರೀನಾಥ್, ಹಣಕಾಸು ಅಧಿಕಾರಿ ಪ್ರೊ.ಆರ್.ಸುನಂದಮ್ಮ, ಸಿಂಡಿಕೇಟ್ ಸದಸ್ಯ ಆರ್.ಸಿ.ಪಾಟೀಲ, ರೆಡ್‌ಕ್ರಾಸ್ ಘಟಕದ ನೋಡಲ್ ಅಧಿಕಾರಿ ಡಾ.ರಮೇಶ್ ಸೋನಕಾಂಬಳೆ, ವಿವಿಧ ಮಹಾ ವಿದ್ಯಾಲಯಗಳ ಪ್ರಾಚಾರ್ಯರು, ವಿಭಾಗಗಳ ಮುಖ್ಯಸ್ಥರು, ಘಟಕದ ಸ್ವಯಂ ಸೇವಕಿಯರು, ಸಂಶೋಧನಾ ಮತ್ತು ಸ್ನಾತಕೋತ್ತರ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

ಎನ್‌ಎಸ್‌ಎಸ್ ಕೋಶ ಸಂಯೋಜಕ ಡಾ.ಬಸವರಾಜ ಲಕ್ಕಣ್ಣವರ ಸ್ವಾಗತಿಸಿದರು. ಎನ್‌ಎಸ್‌ಎಸ್ ಕಾರ್ಯಕ್ರಮ ಅಧಿಕಾರಿ ಡಾ.ಎಂ.ನಾಗರಾಜ ವಂದಿಸಿದರು. ಡಾ.ಅಶೋಕ ಸುರಪುರ ನಿರೂಪಿಸಿದರು.

**ರಾಷ್ಟ್ರ ಮಟ್ಟದ ಪ್ರಶಸ್ತಿ ಪಡೆದ ಮಹಾ ವಿದ್ಯಾಲಯಗಳು:**

ದುದ್ದಪುಡಿ ಮಹಿಳಾ ಮಹಾವಿದ್ಯಾಲಯ ಸಿಂಧನೂರು (ಪ್ರಥಮ), ಅಕ್ಕಮಹಾದೇವಿ ಮಹಿಳಾ ಮಹಾವಿದ್ಯಾಲಯ ಬೈಲಹೊಂಗಲ (ದ್ವಿತೀಯ), ಸಂಕಲ್ಪ ಮಹಿಳಾ ಮಹಾ ವಿದ್ಯಾಲಯ ಗಂಗಾವತಿ (ತೃತೀಯ).

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಯೂತ್ ರೆಡ್‌ಕ್ರಾಸ್ ಘಟಕದ ವತಿಯಿಂದ ವಿಶ್ವ ಆರೋಗ್ಯ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಚರ್ಚಾ ಸ್ಪರ್ಧೆ, ಪ್ರಬಂಧ ಸ್ಪರ್ಧೆ ವಿಜೇತರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

**ಪ್ರಬಂಧ ಸ್ಪರ್ಧೆಯ ವಿಜೇತರು:** ಸ್ವರೂಪರಾಣಿ, ಕನ್ನಡ ಅಧ್ಯಯನ ವಿಭಾಗ (ಪ್ರಥಮ ಸ್ಥಾನ), ಸೌಮ್ಯ ನಾಯ್ಕೋಡಿ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ (ದ್ವಿತೀಯ), ಗಂಗಮ್ಮ ಮಡಿವಾಳರ, ಸಮಾಜಶಾಸ್ತ್ರ ವಿಭಾಗ (ತೃತೀಯ)

**ಚರ್ಚಾ ಸ್ಪರ್ಧೆ ವಿಜೇತರು:** ರೇಣುಕಾ ಶೇಗುಣಸಿ, ಅರ್ಥಶಾಸ್ತ್ರ ವಿಭಾಗ (ಪ್ರಥಮ ಸ್ಥಾನ), ಶಾಹಿನ್ ಮೊಕಾಶಿ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ (ದ್ವಿತೀಯ), ಪೂಜಾ, ವಾಣಿಜ್ಯ ಅಧ್ಯಯನ ವಿಭಾಗ (ತೃತೀಯ).